


# ಅಂಚೆ ಜಾನಪದ

ಸಂಗ್ರಾಹಕರು:
ಎಂ. ಆರ್. ಪ್ರಭಾಕರ




ಕರ್ನಾಟಕ ಜಾನಪದ ಅಕಾಡೆಮಿ

# ಅಂಚೆ ಜಾನಪದ

## ಜಾನಪದ ಸಂಬಂಧಿ ಅಂಚೆಚೀಟಿಗಳ ಸಂಗ್ರಹ

ಸಂಗ್ರಹಕಾರರು :

ಎಂ.ಆರ್. ಪ್ರಭಾಕರ

ಪ್ರಕಾಶಕರು

ಕರ್ನಾಟಕ ಜಾನಪದ ಅಕಾಡೆಮಿ

ಬೆಂಗಳೂರು

"Anche Janapada" A collection of Postal Stamps of various countries related to Folk Arts by M.R. Prabhakara and published by Karnataka Janapada Academy, Bangaluru.

First Edition : 2012
No of copies : 1000
Pages : viii + 69
Price : Rs. 150/-
Paper used : 100 gsm. Art Paper
Cover Design : M.R. Prabhakara
Copy right : First Edition by the publisher
Copies available at : Karnataka Janapada Academy
Kannada Bhavana. J.C. Road.,
Bangaluru - 2

Phone No : 080-22215509

Publication Executed by
B.N. Paraddi, Registor
Karnataka Janapada Academy

Printed by : Geethanjali Gaphics
Rajajnagar, Bangaluru.

# ಲಕೋಟೆಯ ಒಳಗೆ


ಅಧ್ಯಕ್ಷರ ನುಡಿ

ಸಂಗ್ರಾಹಕರ ನುಡಿ

ಅಂಚೆಚೀಟಿಗಳು

| | | | |
|---|---|---|---|
| ಜೀವರಾಶಿ | ೧ | ರಂಗೋಲಿ | ೩೩ |
| ಕ್ರಿಮಿ-ಕೀಟಗಳು | ೨ | ಗ್ರಾಮೀಣ ಕಸುಬುಗಳು | ೩೪ |
| ಜಂತುಗಳು | ೩ | ಮಾದರಿಗಳ ಕಲೆ | ೩೬ |
| ಕಡಲ ಚಿಪ್ಪು | ೪ | ಗ್ರಾಮೀಣ ಕುಶಲ ಕಲೆ | ೩೭ |
| ಜಲಚರಗಳು | ೫ | ಪ್ರದರ್ಶನ ಕಲೆ | ೩೮ |
| ಕಾಡು ಪ್ರಾಣಿಗಳು | ೬ | ಗೊಂಬೆಯಾಟ | ೩೯ |
| ಸಾಕು ಪ್ರಾಣಿಗಳು | ೭ | ಮಕ್ಕಳ ಚಿತ್ರಕಲೆ | ೪೦ |
| ಪ್ರಾಣಿ ಪಕ್ಷಿ | ೮ | ಆಟಿಕೆಗಳು | ೪೧ |
| ಮುದ್ದು ಪಕ್ಷಿ ಪ್ರಾಣಿ | ೯ | ದೇಸಿ ಆಟಗಳು | ೪೨ |
| ಪಕ್ಷಿಗಳು | ೧೦ | ವಾದ್ಯಗಳು | ೪೩ |
| ಪುಷ್ಪಗಳು | ೧೨ | ಜನಪದ ನೃತ್ಯ | ೪೫ |
| ವನಸ್ಪತಿ | ೧೩ | ನೃತ್ಯಗಳು | ೪೭ |
| ಮೂಲನಿವಾಸಿಗಳು | ೧೪ | ವೇಷ-ಭೂಷಣ | ೪೮ |
| ಗಿರಿಜನರು | ೧೫ | ಸ್ತ್ರೀ ವೇಷ-ಭೂಷಣ | ೫೦ |
| ಜನಪದರು | ೧೬ | ವಸ್ತ್ರಕಲೆ | ೫೧ |
| ಜನಜೀವನ | ೧೭ | ಮುಖವಾಡಗಳು | ೫೨ |
| ವ್ಯವಸಾಯ | ೧೮ | ಸಂಗ್ರಹಾಲಯ ವಸ್ತುಗಳು | ೫೭ |
| ಸಾಂಬಾರು ಪದಾರ್ಥ | ೧೯ | ಪ್ರಾಚ್ಯ ವಸ್ತುಗಳು | ೫೮ |
| ಹಣ್ಣು-ತರಕಾರಿ | ೨೦ | ಪಂಚತಂತ್ರ ಕಥೆಗಳು | ೫೯ |
| ಸಾಂಸ್ಕೃತಿಕ | ೨೧ | ಜನ್ಮರಾಶಿಗಳು | ೬೦ |
| ಕರಕುಶಲ ಕಲೆ | ೨೨ | ದಶಾವತಾರಗಳು | ೬೧ |
| ಮಡಕೆ-ಕುಡಿಕೆ | ೨೬ | ದೈವಾರಾಧನೆ | ೬೨ |
| ಚಿತ್ರಕಲೆ | ೨೭ | ಹಬ್ಬಗಳು | ೬೩ |
| ವಿನ್ಯಾಸ ಕಲೆ | ೨೮ | ಉತ್ಸವಗಳು | ೬೪ |
| ಭಿತ್ತಿ ಚಿತ್ರಗಳು | ೩೧ | ಶಿರಶೃಂಗಾರ | ೬೫ |
| ಚದುರಂಗ | ೩೨ | ಅನುಬಂಧ | ೬೬ |

# ಅಧ್ಯಕ್ಷರ ನುಡಿ

ಈ ಪುಸ್ತಕದ ಶೀರ್ಷಿಕೆಯನ್ನು ನೋಡಿದ ಕೂಡಲೇ ಓದುಗರಿಗೆ ಇದೇನಿದು ಎಂದೆನಿಸಬಹುದು. "ಜಾನಪದ"ವೆಂದರೆ ಮುಂಚಿನದು, 'ಅಂಚೆ' ಎನ್ನುವುದು ಈಚಿನದು . ಹೀಗಿರುವಾಗ "ಅಂಚೆ ಜಾನಪದ" ಎಂದರೆ ಏನು ಎಂಬ ಕುತೂಹಲ ಸಹಜ .

ಪರಂಪರೆಯಿಂದ ಬಂದುದು 'ಜಾನಪದ' ಎನ್ನುವುದಾದರೆ, ಅಂಚೆಗೂ ಒಂದು ಪರಂಪರೆಯಿದೆ. ಪ್ರಾಚೀನ ಕಾಲದಲ್ಲಿ ಮೂಲ ನಿವಾಸಿಗಳು ಸನ್ನೆ ಸಂಕೇತಗಳ ಮೂಲಕ ಪರಸ್ಪರ ಸಂಪರ್ಕ ಪಡೆಯುತ್ತಿದ್ದರು . ಪುರಾಣದ ಕಥೆಗಳಲ್ಲಿ ಹಂಸಪಕ್ಷಿಯ ಮೂಲಕ ಪ್ರೇಮ ಸಂದೇಶ ಕಳುಹಿಸುತ್ತಿದ್ದರೆಂದು ಹೇಳಲಾಗಿದೆ. ಪಾರಿವಾಳಗಳ ಮೂಲಕ ಸುದ್ದಿ ಮುಟ್ಟಿಸಲಾಗುತ್ತಿತ್ತೆನ್ನುವುದು ಚರಿತ್ರೆಗಳಿಂದ ತಿಳಿದು ಬರುತ್ತದೆ. ಮಣ್ಣು ಮತ್ತು ಲೋಹದ ಫಲಕಗಳಲ್ಲಿ ಸಂದೇಶ ಬರೆದು ಕಳುಹಿಸುತ್ತಿದ್ದರೆಂದೂ ಹೇಳುತ್ತಾರೆ. ಕುದುರೆಗಳ ಮೇಲೆ ಓಲೆಕಾರರು ಸಂಚರಿಸಿ ಸಮಾಚಾರ ಮುಟ್ಟಿಸುತ್ತಿದ್ದುದಂತೂ ಸಾಮಾನ್ಯ. ಆ ಎಲ್ಲ ಹಿಂದಿನ ವಿಧಾನಗಳೇ ಇಂದಿನ ಅಂಚೆ ವ್ಯವಸ್ಥೆಗೆ ಮೂಲಾಧಾರ. ಈಗ ವಿಶ್ವಾದ್ಯಂತ ಅಂಚೆ ವ್ಯವಸ್ಥೆಯ ಬೃಹತ್ ಜಾಲವೇ ಇದೆ.

ಭಾರತದಲ್ಲಿ ಇಲ್ಲಿಗೆ ಏಳೆಂಟು ನೂರು ವರ್ಷಗಳಿಂದ ಅಂಚೆ ಪದ್ಧತಿ ಜಾರಿಯಲ್ಲಿದೆ. ಬ್ರಿಟಿಷರ ಆಡಳಿತದ ಕಾಲದಲ್ಲಿ (1837) ಅಂಚೆಕಾಯ್ದೆ ಎನ್ನುವುದು ಜಾರಿಗೆ ಬಂದಿತು . 1852 ರಲ್ಲಿ ಸಿಂಧ್ ಪ್ರಾಂತ್ಯದ ಅಂಚೆ ಕಛೇರಿಯಲ್ಲಿ ಸರ್ ಬಾರ್ಟರ್‌ಫ್ರೇರ್ ಎಂಬ ಬ್ರಿಟಿಷ್ ಅಧಿಕಾರಿ ಪ್ರಕಟಿಸಿದ ಅಂಚೆಚೀಟಿಯೇ ಪ್ರಥಮವೆಂದು ಹೇಳಲಾಗಿದೆ. (ನೋಡಿ : ಅಂಚೆಚೀಟಿ ಸಂಗ್ರಹಣೆ - ಎಂ.ಆರ್. ಪ್ರಭಾಕರ - ಪ್ರ: ಕನ್ನಡ ಸಾಹಿತ್ಯ ಪರಿಷತ್ತು). ಪ್ರಪಂಚದ ಎಲ್ಲ ರಾಷ್ಟ್ರಗಳೂ ತಮ್ಮದೇ ಆದ ಅಂಚೆ ನಿಯಮಗಳನ್ನು ಅನುಸರಿಸುತ್ತಿದ್ದು, ಅಂತಾರಾಷ್ಟ್ರೀಯ ವ್ಯವಸ್ಥೆಗೂ ಆ ನಿಯಮಗಳಲ್ಲಿ ಅವಕಾಶ ಕಲ್ಪಿಸಿಕೊಂಡಿವೆ.

ಅಂಚೆ ಎಂದರೆ ಪತ್ರ , ಮುದ್ರಿತ ಸಾಹಿತ್ಯ ಮತ್ತಿತರ ವಸ್ತುಗಳ ಭಾಂಗಿ, ಹಣ ಇತ್ಯಾದಿಗಳ ಸಾಗಣೆ ವ್ಯವಸ್ಥೆ. ಹಣ ಕಳುಹಿಸುವ 'ಮನಿ ಆರ್ಡರ್' ಹೊರತಾಗಿ ಉಳಿದೆಲ್ಲಾ ಅಂಚೆ ವ್ಯವಸ್ಥೆಗೂ ಅಂಚೆ ಚೀಟಿಗಳೇ ಸಾಗಣೆ ವೆಚ್ಚದ ಮೌಲ್ಯಮಾಪನ. ಈ ಅಂಚೆಚೀಟಿಗಳ ಮೇಲೆ ಆಯಾ ದೇಶಗಳಲ್ಲಿ ಆಳುವ ರಾಜ-ರಾಣಿಯರ ಚಿತ್ರಗಳನ್ನು ಮುದ್ರಿಸುವುದು ಆರಂಭದ ಕಾಲದಲ್ಲಿ ರೂಢಿಯಲ್ಲಿದ್ದಂತೆ ಕಾಣುತ್ತದೆ. ಆದರೆ ಕಾಲ ಕಳೆದಂತೆಲ್ಲ, ಆಡಳಿತ ವ್ಯವಸ್ಥೆಗಳಲ್ಲಿ ಬದಲಾವಣೆ ಆದಂತೆಲ್ಲ ಈ ಅಂಚೆಚೀಟಿಗಳ ಸ್ವರೂಪದಲ್ಲೂ ಬದಲಾವಣೆ ಆಗುತ್ತಾ ಬಂದಿದೆ.

ಈಗಂತೂ ಅಂಚೆಚೀಟಿಗಳದ್ದೇ ಒಂದು ಪ್ರಪಂಚವಾಗಿದೆ. ಬೇರೆ ಬೇರೆ ದೇಶಗಳು ಆಯಾ ದೇಶದ ಪ್ರಮುಖ ಸಂದರ್ಭಗಳ ಅಥವಾ ಮಹತ್ವದ ವ್ಯಕ್ತಿಗಳ ಸ್ಮರಣೆಗಾಗಿ ವಿಶೇಷ ಅಂಚೆಚೀಟಿಗಳನ್ನು ಹೊರತರುತ್ತಿವೆ. ಆಯಾ ದೇಶದ ನಿಸರ್ಗ ಸಂಪತ್ತು, ಪ್ರಾಣಿ ಪಕ್ಷಿ, ಪ್ರವಾಸಿ ತಾಣ , ಪ್ರಾಚೀನ ಕಟ್ಟಡ, ಜನಜೀವನ, ಕಸುಬು - ಕಲೆಗಳು, ಐತಿಹಾಸಿಕ ಘಟನೆಗಳು, ಸಾಂಸ್ಕೃತಿಕ ವೈವಿಧ್ಯ - ಹೀಗೆ ನಾನಾ ರೂಪದ ಚಿತ್ರಗಳಿರುವ ಅಂಚೆಚೀಟಿಗಳಿಗಂತೂ ಲೆಕ್ಕವಿಲ್ಲ.

ಅಂಚೆಚೀಟಿಗಳ ಸಂಗ್ರಹ ಒಂದು ಹವ್ಯಾಸ. ಈ ಹವ್ಯಾಸ ಈಗ ವಿಶ್ವ-ಮಾನ್ಯವಾಗಿದೆ. ಎಷ್ಟೋ ಜನ ಹವ್ಯಾಸಿಗಳು ಅಂಚೆಚೀಟಿ ಸಂಗ್ರಹದಲ್ಲಿ ದಾಖಲೆಗಳನ್ನೇ ಸ್ಥಾಪಿಸಿದ್ದಾರೆ. ನಮ್ಮನಾಡಿನ ಅಂತಹ ಪ್ರಮುಖ ಸಂಗ್ರಾಹಕರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಮೇಲೂರಿನ ಶ್ರೀ ಎಂ. ಆರ್. ಪ್ರಭಾಕರ್ ಅವರು ಒಬ್ಬರು. "ಕರ್ನಾಟಕ ಗ್ರಾಮಾಂತರ ಅಂಚೆಚೀಟಿ ಸಂಗ್ರಹಕಾರರ ಸಂಘ" ವನ್ನೇ ಸಂಘಟಿಸಿರುವ ಪ್ರಭಾಕರ್ ಅವರು, ತಮ್ಮ ಹುಟ್ಟೂರು ಮೇಲೂರಿನಲ್ಲಿ ರಾಷ್ಟ್ರದಲ್ಲೇ ಪ್ರಥಮವೆನಿಸಿದ ಅಂಚೆಚೀಟಿ ಪ್ರದರ್ಶನ ನಡೆಸಿದವರು. ಇದುವರೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಶಾಲಾ-ಕಾಲೇಜುಗಳು, ಸಂಘ-ಸಂಸ್ಥೆಗಳು ಹಾಗೂ ಸಭೆ-ಸಮಾರಂಭದ ಸಂದರ್ಭಗಳಲ್ಲಿ ಹತ್ತಿರ ಹತ್ತಿರ ಒಂದು ಸಾವಿರದ ಏಳುನೂರು ಪ್ರದರ್ಶನಗಳನ್ನು ಏರ್ಪಡಿಸಿರುವ ಪ್ರಭಾಕರ್ ಅವರು "ಅಂಚೆಚೀಟಿ ಸಂಗ್ರಹಣೆ" ಎಂಬ ಒಂದು ಕೃತಿಯನ್ನೇ ರಚಿಸಿದ್ದಾರೆ. ಆ ಕೃತಿಯಲ್ಲಿ ಅಂಚೆ ವ್ಯವಸ್ಥೆಯ ಹಿನ್ನೆಲೆ, ಅಂಚೆಚೀಟಿಗಳ ಇತಿಹಾಸ, ಅಂಚೆಚೀಟಿ ಸಂಗ್ರಹ, ಸಂಗ್ರಹ ವಿಧಾನ ವಿವಿಧ ದೇಶಗಳಲ್ಲಿ ಅಂಚೆಚೀಟಿ ಪದ್ಧತಿಯ ಆರಂಭ- ಹೀಗೆ ತುಂಬಾ ಉಪಯುಕ್ತ ಮಾಹಿತಿ ನೀಡಿದ್ದಾರೆ.

ವಿಶ್ವದಾದ್ಯಂತ ಯಾವ ಯಾವ ರಾಷ್ಟ್ರಗಳು ಯಾವ ಯಾವ ವರ್ಷದಲ್ಲಿ ಮೊದಲ ಬಾರಿಗೆ ಅಂಚೆಚೀಟಿ ಚಾಲ್ತಿಗೆ ತಂದಿವೆ ಎಂಬುದಕ್ಕೆ ಒಂದು ದೊಡ್ಡ ಪಟ್ಟಿಯನ್ನೇ ತಮ್ಮ ಕೃತಿಯಲ್ಲಿ ಕೊಟ್ಟಿರುವ ಪ್ರಭಾಕರ್ ಅವರು, ಈಗ ವಿಶ್ವದ ಸುಮಾರು 265 ರಾಷ್ಟ್ರಗಳು ಅಂಚೆಚೀಟಿಗಳನ್ನು ಹೊರತರುತ್ತಿರುವ ಸಂಗತಿ ತಿಳಿಸುತ್ತಾರೆ. ಅವರು ಕೊಟ್ಟಿರುವ ಪಟ್ಟಿ ಪ್ರಕಾರ ವಿಶ್ವದಲ್ಲೇ ಮೊದಲ ಅಂಚೆಚೀಟಿ ಹೊರತಂದ ದೇಶ ಗ್ರೇಟ್ ಬ್ರಿಟನ್.

ಅಂಚೆಚೀಟಿ ಸಂಗ್ರಹವನ್ನು ಒಂದು ಪ್ರಧಾನ ಹವ್ಯಾಸವಾಗಿ ಇಟ್ಟುಕೊಂಡಿರುವ ಪ್ರಭಾಕರ್ ಅವರು ಏರ್ಪಡಿಸಿದ್ದ ಒಂದು ಅಂಚೆಚೀಟಿ ಪ್ರದರ್ಶನಕ್ಕೆ ನಾನು ಭೇಟಿ ನೀಡಿದ್ದೆ. ಅಲ್ಲಿ ಪ್ರದರ್ಶನಗೊಂಡಿದ್ದ ಕೆಲವು ಅಂಚೆಚೀಟಿಗಳಲ್ಲಿ ಜಾನಪದ ಸಂಬಂಧದ ಚಿತ್ರಗಳಿದ್ದುದನ್ನು ಗಮನಿಸಿ, ಅಂತಹ ಚಿತ್ರಗಳಿರುವ ಅಂಚೆಚೀಟಿಗಳನ್ನೇ ಪ್ರತ್ಯೇಕವಾಗಿ ಸಂಯೋಜಿಸಿ ಕೊಟ್ಟರೆ ಅಕಾಡೆಮಿಯಿಂದ

ಪ್ರಕಟಿಸಲು ವಿಚಾರಮಾಡಬಹುದೆಂದು ನಾನು ಪ್ರಭಾಕರ್ ಅವರಿಗೆ ತಿಳಿಸಿದೆ, ನನ್ನ ಸಲಹೆಯನ್ನು ಕೃತಿಗಿಳಿಸಲು ತಡಮಾಡದೆ, ಅಂತಹ ಜಾನಪದ ಸಂಬಂಧಿ ಅಂಚೆಚೀಟಿಗಳ ಸಂಗ್ರಹವೊಂದನ್ನು ಸಿದ್ಧಪಡಿಸಿ ತಂದೇಬಿಟ್ಟರು. ವಿದ್ಯಾರ್ಥಿಗಳಿಗೆ ಈ ಸಂಗ್ರಹ ಆಸಕ್ತಿ ಹುಟ್ಟಿಸುವುದೆಂಬ ದೃಷ್ಟಿಯಿಂದ ಅದರ ಪ್ರಕಟಣೆಯ ಪ್ರಸ್ತಾಪವನ್ನು ಅಕಾಡೆಮಿಯ ಸಭೆಯ ಮುಂದಿಟ್ಟೆ. ಸದಸ್ಯರೆಲ್ಲಾ ಸಂತೋಷದಿಂದ ಸಮ್ಮತಿ ವ್ಯಕ್ತಪಡಿಸಿದರು.

ಶ್ರೀ ಪ್ರಭಾಕರ್ ಅವರೊಡನೆ ಕುಳಿತು ಚರ್ಚಿಸಿ, ಸಂಗ್ರಹಿತ ಅಂಚೆಚೀಟಿಗಳನ್ನು ಸ್ಥೂಲವಾಗಿಯಾದರೂ ವರ್ಗೀಕರಣಮಾಡಬೇಕೆಂದು ವಿಚಾರಮಾಡಿ ಜಾನಪದಕ್ಕೆ ನೇರವಾಗಿ ಸಂಬಂಧಿಸಿದ ಮತ್ತು ಅದರ ನೆರಳಿನಲ್ಲೇ ಬರುವಂತಹ ಬೇರೆ ಬೇರೆ ದೇಶಗಳ ಅಂಚೆ ಚೀಟಿಗಳನ್ನು "ಅಂಚೆಜಾನಪದ" ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಕೆಲವು ಅಂಚೆ ಚೀಟಿಗಳ ಮೇಲೆ ಅದನ್ನು ಹೊರತಂದ ದೇಶಗಳ ಹೆಸರುಗಳು ಸ್ಪಷ್ಟವಾಗಿರಲಿಲ್ಲ ಅಥವಾ ಆಯಾ ದೇಶದ ಭಾಷೆಯಲ್ಲಿವೆ. ಕೆಲವು ದೇಶಗಳ ಹೆಸರುಗಳ ಉಚ್ಚಾರದಲ್ಲೂ ವ್ಯತ್ಯಾಸವುಂಟಾಗಿರಬಹುದು. ಏನಿದ್ದರೂ ಇಂತಹದೊಂದು ಪ್ರಕಟಣೆಯನ್ನು ಅಕಾಡೆಮಿಯು ಸಂತೋಷದಿಂದ ಹೊರತಂದಿದೆ.

ಇಲ್ಲಿರುವ ಅಂಚೆ ಚೀಟಿಗಳಲ್ಲಿ ಆದಿ ಮಾನವನಿಂದ ಹಿಡಿದು ಆಧುನಿಕ ನಾಗರಿಕತೆಯವರೆಗಿನ ಮಾನವ ಜೀವನ, ಅವನ ಕಸಬು-ಕಲೆಗಳು, ಹವ್ಯಾಸಗಳು, ಕ್ರೀಡೆಗಳು, ಮನರಂಜನಾ ಮಾಧ್ಯಮಗಳು, ಮಕ್ಕಳ ಚಿತ್ರಗಳು, ಕುಶಲಕಲೆಗಳು ಅವನಿಗೆ ಹತ್ತಿರವಾದ ನಿಸರ್ಗದ ಪಕ್ಷಿ-ಪ್ರಾಣಿಗಳು, ಆಚರಿಸುವ ಹಬ್ಬ-ಉತ್ಸವಗಳು, ಹಾಕುವ ವೇಷ-ಭೂಷಣಗಳು, ಬಳಸುವ ಸಾಧನ ಸಲಕರಣೆಗಳು, ವಾದ್ಯಗಳು. ಹೀಗೆ ನಾನಾ ವಿಧದ, ನಾನಾ ರೂಪದ ಚಿತ್ರಗಳಿವೆ. ಪ್ರತಿಯೊಂದು ವರ್ಗದ ಅಂಚೆ ಚೀಟಿಗಳಿಗೆ ಸಂಬಂಧಿಸಿದಂತೆ ಸ್ಥೂಲ ಹಾಗೂ ಸಾಮಾನ್ಯ ಪರಿಚಯ ನೀಡಲಾಗಿದೆ. ವಿಶೇಷವೆಂದರೆ, ಪರಿಚಯ ಸಾಹಿತ್ಯವನ್ನು ಸಂಗ್ರಹಕಾರ ಶ್ರೀ ಪ್ರಭಾಕರ್ ಅವರ ಹಸ್ತಲಿಪಿಯಲ್ಲೇ ಕೊಟ್ಟಿರುವುದು.

ಇಲ್ಲಿ ಮುದ್ರಿತವಾಗಿರುವ ಅಂಚೆ ಚೀಟಿಗಳನ್ನು ಗಮನಿಸಿದರೆ, ಜಗತ್ತಿನಾದ್ಯಂತ ಜಾನಪದಕ್ಕೆ ಇರುವ ಮನ್ನಣೆ ಅರ್ಥವಾಗುತ್ತದೆ. ಜಾನಪದ ಅಂಶದ ಕಲಾತ್ಮಕ ಆಕರ್ಷಣೆ ಹೊಂದಿರುವುದೂ ನಿಜ. ಸ್ವಾರಸ್ಯಕ್ಕೆ ಕೇಳುವುದಾದರೆ, ಅಂಚೆಚೀಟಿಯೊಂದರ ಮೇಲೆ ಬೀಸುವ ಕಲ್ಲಿನ ಚಿತ್ರಕ್ಕೆ ಬದಲಾಗಿ "ಫ್ಲೋರ್ ಮಿಲ್" ಚಿತ್ರವನ್ನು ಮುದ್ರಿಸಿದರೆ ಹೇಗಾಗಬಹುದು. ಬೀಸುವ ಕಲ್ಲಿನ ಕಲಾತ್ಮಕತೆ "ಫ್ಲೋರ್ ಮಿಲ್"ಗೆ ಬರಲು ಸಾಧ್ಯವೆ? ಹಾಗಾಗಿ ಅಂಚೆಚೀಟಿಗೆ ಜಾನಪದ ವಸ್ತುವೇ ತುಂಬಾ ಒಪ್ಪುವಂತಹದು.

ಈ ಸಂಗ್ರಹವನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಅಂಬಳಿಕೆ ಹಿರಿಯಣ್ಣ ಅವರಿಗೆ ಅಕಾಡೆಮಿಯು ಕೃತಜ್ಞವಾಗಿದೆ.

ಈ ಕೃತಿಯನ್ನು ಅಲ್ಪಸಮಯದಲ್ಲೇ ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ಗೀತಾಂಜಲಿ ಗ್ರಾಫಿಕ್ಸ್ ಅವರಿಗೂ, ಕೃತಿಹೊರತರಲು ಅಗತ್ಯಕ್ರಮ ಕೈಗೊಂಡ ನಮ್ಮ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಅವರು ಮತ್ತು ಕಾರ್ಯಾಲಯದ ಸಿಬ್ಬಂದಿಗೂ ವಂದನೆಗಳು.

ಶ್ರದ್ಧಾಸಕ್ತಿಯಿಂದ ಈ ಸಂಗ್ರಹವನ್ನು ಸಿದ್ಧಪಡಿಸಿಕೊಟ್ಟ ಶ್ರೀ ಎಂ. ಆರ್. ಪ್ರಭಾಕರ ಅವರಿಗೆ ಕೃತಜ್ಞತೆಗಳು

ಬೆಂಗಳೂರು
15.2.2012

ಗೊ.ರು.ಚನ್ನಬಸಪ್ಪ
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಸಂಗ್ರಾಹಕನ ನುಡಿ

ಅಂಚೆಚೀಟಿಗಳ ಸಂಗ್ರಹ ನಾನು ಕಳೆದ ಮೂರು ದಶಕಗಳಿಂದ ಬೆಳೆಸಿಕೊಂಡು ಬಂದಿರುವ ಹವ್ಯಾಸ. ಈ ಹವ್ಯಾಸ ನನಗೆ ವೈಯಕ್ತಿಕವಾಗಿ ತೃಪ್ತಿ ತಂದು ಕೊಟ್ಟಿದೆ. ನಾನು ಇದುವರೆಗೆ ವಿಶ್ವದ ನಾನಾ ದೇಶಗಳ ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚು ಅಂಚೆಚೀಟಿಗಳನ್ನು ಸಂಗ್ರಹಿಸಿದ್ದೇನೆ. ಸಾವಿರದ ಏಳುನೂರಕ್ಕೂ ಹೆಚ್ಚು ಅಂಚೆಚೀಟಿ ಪ್ರದರ್ಶನಗಳನ್ನು ಏರ್ಪಡಿಸಿದ್ದೇನೆ.

ಅಂಚೆಚೀಟಿಗಳ ಮಹತ್ವದ ಬಗೆಗೆ ಪೂರ್ಣ ಮನವರಿಕೆ ಮಾಡಿಕೊಂಡಿರುವ ನಾನು ರಚಿಸಿದ "ಅಂಚೆಚೀಟಿ ಸಂಗ್ರಹಣೆ" ಎಂಬ ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತಿನವರು ಬೀದರಿನಲ್ಲಿ ನಡೆದ 72 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟಿಸಿದ್ದಾರೆ. ಇದೀಗ ಕರ್ನಾಟಕದ ಜಾನಪದ ಅಕಾಡೆಮಿಯು ನನ್ನ ಕೆಲವು ಜಾನಪದ ಸಂಬಂಧಿ ಅಂಚೆಚೀಟಿಗಳ ಸಂಗ್ರಹವನ್ನು ಪ್ರಕಟಿಸುತ್ತಿರುವುದು ನನಗೆ ಅತ್ಯಂತ ಸಂತೋಷವುಂಟು ಮಾಡಿದೆ.

ವಾಸ್ತವವಾಗಿ ನಾನು ಅಂಚೆಚೀಟಿ ಸಂಗ್ರಹಿಸುವಾಗ ಈ ದೃಷ್ಟಿಯಿಂದ ವಿಚಾರ ಮಾಡಿರಲಿಲ್ಲ. ಆದರೆ ಬಿ.ಇ.ಎಲ್‌ನ ಕರ್ನಾಟಕ ಕಾರ್ಮಿಕರ ಹಿತರಕ್ಷಣಾ ಸಮಿತಿಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಾನು ಏರ್ಪಡಿಸಿದ್ದ ಅಂಚೆಚೀಟಿ ಪ್ರದರ್ಶನಕ್ಕೆ ಭೇಟಿ ನೀಡಿದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಜಾನಪದಕ್ಕೆ ಸಂಬಂಧಿಸಿದ ಅಂಚೆಚೀಟಿಗಳನ್ನು ಆಯ್ಕೆಮಾಡಿಕೊಂಡು ಒಂದು ಸಂಗ್ರಹ ರೂಪದಲ್ಲಿ ಪ್ರಕಟಿಸಬಾರದೇಕೆ? ಎಂದು ಸಲಹೆ ಮಾಡಿದರು. ಅವರು ನೀಡಿದ ಸಲಹೆಯ ಫಲವೇ ಈ 'ಅಂಚೆ ಜಾನಪದ'. ನಾನು ಕೇವಲ ಹವ್ಯಾಸಿ ಸಂಗ್ರಾಹಕ. ನಾನು ಸಂಗ್ರಹಿಸಿರುವ ಈ ಜಾನಪದ ಸಂಬಂಧಿ ಅಂಚೆ ಚೀಟಿಗಳನ್ನು ವರ್ಗೀಕರಿಸಿ, ಅವಕ್ಕೆ ಸ್ಥೂಲ ಪರಿಚಯ ಸಾಹಿತ್ಯನೀಡಿ ನೆರವಾದವರು ಶ್ರೀ ಗೊ.ರು.ಚ ಅವರೇ. ಕೃತಿಗೆ ಹೆಸರು ಕೊಟ್ಟವರೂ ಅವರೇ ಇಂತಹ ಒಂದು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ನಾನು ಕರ್ನಾಟಕ ಜಾನಪದ ಅಕಾಡೆಮಿಗೆ ಕೃತಜ್ಞನಾಗಿದ್ದೇನೆ. ಈ ಕೃತಿಯ ಬಗೆಗೆ ಆಸಕ್ತಿ ವಹಿಸಿ ಪ್ರಕಟಿಸಿರುವ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಮರಡ್ಡಿ ಮತ್ತು ಅವರ ಸಿಬ್ಬಂದಿಗೂ ಕೃತಜ್ಞತೆ ಅರ್ಪಿಸುತ್ತೇನೆ.

ಎಂ. ಆರ್. ಪ್ರಭಾಕರ.

# ಜೀವರಾಶಿ










ಬಣ್ಣಬಣ್ಣದ ಚಿಟ್ಟೆಗಳು, ಬೃಹದಾಕಾರದ ಆಮೆ ಮಿಶ್ರವರ್ಣದ ಹಾವುಗಳು. ಎಮ್ಮೆ, ಎತ್ತು, ಬೆಕ್ಕು, ಹುಲಿ, ಜಿಂಕೆಗಳು ಭಾರತದ ಅಸಂಖ್ಯಾತ ಜೀವರಾಶಿಗಳ ಭಾಗ.

# ಕ್ರಿಮಿ ಕೀಟಗಳು

ಸೃಷ್ಟಿಯಲ್ಲಿ ಪ್ರಾಣಿ ಪಕ್ಷಿಗಳಲ್ಲಿ ಹೇಗೆ ಲೆಕ್ಕವಿಲ್ಲದಷ್ಟು ಜಾತಿಗಳಿವೆಯೋ ಹಾಗೆ ಕ್ರಿಮಿಕೀಟಗಳೂ ಲೆಕ್ಕವಿಲ್ಲದಷ್ಟಿವೆ. ಇವನ್ನು ಕಾಡಿನಲ್ಲೂ ಕಾಣಬಹುದು ನಾಡಿನಲ್ಲೂ ನೋಡಬಹುದು. ಇವುಗಳ ಆಕಾರ, ಬಣ್ಣ ವಿಚಿತ್ರವಾಗಿರುತ್ತವೆ ಬಹುತೇಕ ಕ್ರಿಮಿ ಕೀಟಗಳು ಹೆಸರೇ ಹೇಳುವಂತೆ ಮಾನವ ದೇಹಕ್ಕೆ ಹಾನಿಕಾರಕ. ಇವೆಲ್ಲ ಪರಾವಲಂಬಿ ಜೀವಿಗಳು. ಹಸಿರಿನ ಮೇಲೆ, ನೆಲದ, ಕೆಸರು ಕೊಳಕುಗಳ ಮೇಲೆ ಜೀವಿಸುವಂಥವೂ ಕೆಲವಿರುತ್ತವೆ.

ಮಾಲಿ




ಆಫ್ರಿಕ




ಕ್ಯಾಮರೂನ್




ಕೊರಿಯ










ರೊಮಾನಿಯ




ಹಂಗೇರಿ..






# ಜಂತುಗಳು

ಹಾಂಗ್‌ಕಾಂಗ್





ಗಿನಿಬಸು




ಸಿಂಗಪೂರ್




ಮಂಗೋಲಿಯ




ಅಂಗೋಲ




ರವಾಂಡೈಸ್




ಕ್ರಿಮಿ, ಕೀಟ, ಜಂತು
ಇತ್ಯಾದಿ ಜೀವರಾಶಿಗಳದ್ದೇ
ಒಂದು ಪ್ರಪಂಚ.
ಜೇನಿನಂಥ ಹುಳು
ಹೂವಿನ ರಸ ಹೀರಿ ತಂದು
ಜೇನುತುಪ್ಪ ಕೊಟ್ಟರೆ,
ನೊಣದಂತ ಹುಳು ಕೊಳಕನ್ನು
ಹೊತ್ತು ತಂದು ರೋಗ
ಹರಡಲು ಕಾರಣವಾಗುತ್ತದೆ.
ಹಾವಂತೂ ವಿಷ ಜಂತು.
ಹೀಗೆ ಸಿಹಿ ಪದಾರ್ಥಗಳತ್ತ ಮುತ್ತುವ
ಇರುವೆ ಗೊದ್ದಗಳೂ
ಅಸಂಖ್ಯಾತ. ನಿದ್ದೆ ಕೆಡಿಸುವ
ಸೊಳ್ಳೆಗಳೂ ಸಾಕಷ್ಟಿವೆ.
ಎಲ್ಲಾ ಕ್ರಿಮಿ, ಕೀಟ, ಜಂತುಗಳೂ
ಅಪಾಯಕಾರಿಗಳಲ್ಲ.

# ಕಡಲ ಚಿಪ್ಪು

ಕಡಲ ತೀರದಲ್ಲಿ ಜಲಚರ ಜೀವಿಗಳ ನಾನಾಬಗೆಯ ವರ್ಣಮಯ ವಿನ್ಯಾಸಗಳ ಚಿಪ್ಪುಗಳು ದೊರೆಯುತ್ತವೆ. ಆ ಚಿಪ್ಪುಗಳನ್ನೇ ಅಲಂಕಾರ ವಸ್ತುಗಳಾಗಿ ಜನ ಬಳಸುತ್ತಾರೆ. ಕರಕುಶಲ ಕಲಾವಿದರು ಅವುಗಳನ್ನು ಬಳಸಿಯೇ ಆಕರ್ಷಕ ಅಲಂಕಾರ ವಸ್ತುಗಳನ್ನು ತಯಾರಿಸುತ್ತಾರೆ. ಸೃಷ್ಟಿಯ ವೈಚಿತ್ರ್ಯಕ್ಕೆ ಈ ಚಿಪ್ಪುಗಳೇ ಸಾಕ್ಷಿ.







ಭಾರತ




ಶ್ರೀಲಂಕಾ

# ಜಲಚರಗಳು

ಮಂಗೋಲಿಯಾ







ಬ್ಲೀಜ್




ಮಾಲ್ಡೀವ್ಸ್

ಶ್ರೀಲಂಕಾ







ಅಂಗೋಲ




ಅಂಗೋಲ




ಟಾಂಜಾನಿಯ, ಉಗಾಂಡ, ಕೆನ್ಯಾ

ಭೂಮಿಯ ಮೇಲಿರುವ ಜೀವರಾಶಿಗಳಿಗೆ ಲೆಕ್ಕವಿಲ್ಲ, ಹಾಗೆಯೇ ಜಲಚರಗಳದ್ದೇ ಒಂದು ಜಗತ್ತು. ಸಾಧು ಜೀವಿಗಳಿರುವಂತೆ ಕ್ರೂರ ಪ್ರಾಣಿಗಳೂ ಇರುತ್ತವೆ. ಕೆಲವು ಜೀವಿಗಳು ಮತ್ತೆ ಕೆಲವಕ್ಕೆ ಆಹಾರವೇ ಆಗಿವೆ. ಈ ಸಾಗರದ ಜೀವಿಗಳ ಸಡಗರವನ್ನು ಸಾಗರದಲ್ಲೇ ನೋಡಬೇಕು. ಅವು ನೀರು ಬಿಟ್ಟು ಹೊರಗೆ ಇರಲಾರವು.

# ಕಾಡು ಪ್ರಾಣಿಗಳು

ದಕ್ಷಿಣ ಆಫ್ರಿಕ







ನಾಡಿಗೆ ಮಾನವ
ಜೀವಿಗಳು ಭೂಷಣ,
ಕಾಡಿಗೆ ಮೃಗ ಜೀವಿಗಳು
ಭೂಷಣ . ಕಾಡು
ಪ್ರಾಣಿಗಳಲ್ಲಿ ಆನೆ ,ಹುಲಿ
ಸಿಂಹ , ಕರಡಿ ,ಘೇಂಡಾ,
ಚಿರತೆ , ಕಾಡುಹಂದಿ
ಇತ್ಯಾದಿಗಳಿರುತ್ತವೆ.
ಪ್ರಪಂಚದ
ಎಲ್ಲ ಕಡೆಯೂ
ಈ ಕಾಡು ಪ್ರಾಣಿಗಳನ್ನು
ಕಾಣಬಹುದು.
ಸಾಮಾನ್ಯವಾಗಿ ಇವು
ಅಪಾಯಕಾರಿ.ಆದರೂ
ಅವು ಅರಣ್ಯ ಸಂಪತ್ತು.
ಅವುಗಳನ್ನು ನಾಶ
ಮಾಡಬಾರದೆಂದು
ಎಲ್ಲ ದೇಶಗಳು
ಕಾನೂನು ಮಾಡಿವೆ.ಕಾಡಿನಲ್ಲಿ
ಮರಗಳು ಎಷ್ಟು
ಮುಖ್ಯವೋ
ಈ ಮೃಗಗಳೂ
ಅಷ್ಟೇ ಮುಖ್ಯ.





ಸಿಲೋನ್







ಬುರಿಟಿಯ




ಅಫ್ಘಾನಿಸ್ಥಾನ







ಐವರಿ ರಿಪಬ್ಲಿಕ್

ಅಂಗೋಲ.

# ಸಾಕು ಪ್ರಾಣಿಗಳು







ಸ್ವಿಡ್ಜರ್ ಲ್ಯಾಂಡ್

ಕೊರಿಯ














ಕ್ಯೂಬ

ಕೆನಡ



















ಭೂತಾನ್ ದಕ್ಷಿಣ ಆಫ್ರಿಕ ಐವರಿ-ರಿಪಬ್ಲಿಕ್

ಮಾನವ ತನ್ನ ಜೀವನಾಧಾರಕ್ಕಾಗಿ ದನಕರು, ಕುರಿ, ಮೇಕೆ, ಮೊಲ ಇತ್ಯಾದಿ ಸಾಧು ಪ್ರಾಣಿಗಳನ್ನು ಸಾಕುತ್ತಾನೆ. ಈ ಪ್ರಾಣಿಗಳು ಬೇರೆ ಬೇರೆ ರೂಪದಲ್ಲಿರಬಹುದು. ಜಿಂಕೆ ಮೊಲಗಳಂತಹ ಸಾಧು ಪ್ರಾಣಿಗಳು ಕಾಡಿನಲ್ಲಿ ತಾವೇ ತಾವಾಗಿರುತ್ತವೆ. ಸಾಮಾನ್ಯವಾಗಿ ಸಾಧು ಪ್ರಾಣಿಗಳು ಹಾಲು-ಹೈನ, ಮಾಂಸ-ಚರ್ಮ ಇತ್ಯಾದಿಗಳಿಗೆ ಬಳಕೆಯಾಗುತ್ತವೆ.

# ಪ್ರಾಣಿ-ಪಕ್ಷಿ

ಪ್ರಾಣಿ ಪಕ್ಷಿಗಳು
ಎಲ್ಲಾ ದೇಶಗಳಲ್ಲಿ ಇದ್ದರೂ
ಆಕಾರ ಬಣ್ಣಗಳಲ್ಲಿ
ವ್ಯತ್ಯಾಸವಿರಬಹುದು.
ಕಾಡು ಪ್ರಾಣಿಗಳ ಬೇಟೆ
ಗುಡ್ಡಗಾಡಿನ ಜನರಲ್ಲಿ ಸಾಮಾನ್ಯ.
ದನ ಕುರಿಗಳನ್ನು ಸಾಕುವುದು
ಜನ ವಸತಿಗಳಲ್ಲಿ.
ಕಾಡಿನ ಸಾಧು ಪ್ರಾಣಿಗಳು
ಕಾಡು ಜನರ ಆಹಾರಕ್ಕೆ
ಬಳಕೆಯಾದರೆ, ದನ, ಕುರಿ
ಮೊದಲಾದವು ನಾಡ ಜನರ
ಬೇಸಾಯದ ಬದುಕಿಗೆ
ಬೇಕಾಗುತ್ತವೆ.




ಚಾಡ್




ಡೊಹೋಮೆ




ಚಾಡ್




ಮಾಲಿ




ಚಾಡ್



# ಮುದ್ದು ಪಕ್ಷಿ-ಪ್ರಾಣಿ




ಜಪಾನ್







ಜಪಾನಿನಲ್ಲಿ ಗಿಳಿ, ಬೆಕ್ಕು, ಮೊಲ, ನಾಯಿ ಮೊದಲಾದವು ಜನರ ಸಾಕು ಪಕ್ಷಿ ಪ್ರಾಣಿಗಳು. ಮುದ್ದು ಪ್ರಾಣಿಗಳೊಡನೆ ಲಲ್ಲೆಯಾಡುವುದು ಬೇಸರ ಪರಿಹಾರದ ಒಂದು ಹವ್ಯಾಸ.

# ಪಕ್ಷಿಗಳು - ೧

ಭಾರತ..
















ನೆಲದ ಮೇಲೆ ನಡೆದಾಡುವ ಮಾನವ ಮತ್ತು ಮೃಗ ಜಾತಿಯ ಪ್ರಾಣಿಗಳಿದ್ದಂತೆ ಆಕಾಶದಲ್ಲಿ ವಿಹರಿಸುವ ಪಕ್ಷಿಗಳು ಅನೇಕವಿವೆ. ಭಾರತದಲ್ಲಿ ಗುಬ್ಬಿ, ಕಾಗೆ, ಬೆಳ್ಳಕ್ಕಿ, ಗೂಬೆ ಪಾರಿವಾಳ, ಗೌಜುಗ ಮೊದಲಾದ ವಿವಿಧ ಜಾತಿಯ ಪಕ್ಷಿಗಳಿವೆ. ಬಣ್ಣಬಣ್ಣದ ರೆಕ್ಕೆ ಪುಕ್ಕಗಳ ಈ ಪಕ್ಷಿಗಳ ಹಾರಾಟ ಮತ್ತು ಚಿಲಿಪಿಲಿ ದನಿಗಳನ್ನು ನೋಡಿ ಕೇಳುವುದೇ ಒಂದು ಹರ್ಷದ ಅನುಭವ. ಹಾದಿ ಬೀದಿಗಳಲ್ಲಿ ಚೆಲ್ಲಿರುವ ಕಾಳು, ಹಾರಾಡುವ ಹುಳ ಹುಪ್ಪಟೆಗಳೇ ಇವುಗಳ ಆಹಾರ. ಬಹುಶಃ ಈ ಪಕ್ಷಿಗಳು ಯಾರಿಗೂ ತೊಂದರೆ ಕೊಡುವುದಿಲ್ಲ.

# ಪಕ್ಷಿಗಳು-೨

ಪೋಲ್ಯಾಂಡ್

ರೊಮಾನಿಯ

ಕೊರಿಯ




ಇಂಗ್ಲೆಂಡ್

ಆಸ್ಟ್ರೇಲಿಯ

ಮಂಗೋಲಿಯ

ಹಂಗೇರಿ

ಬೆನಿನ್

ನಿಕಾರಗುವ


ವಿಶ್ವದ ಎಲ್ಲ ಕಡೆಯೂ ಹಕ್ಕಿಗಳ ಸಾಮ್ರಾಜ್ಯವಿದೆ. ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸುವ ಜೀವಿಗಳೆಂದರೆ ಪಕ್ಷಿಗಳು. ಅವು ಹಾರಾಡುವ ಬಯಲು, ಕೂರುವ ಮರದ ಕೊಂಬೆ ಅಥವ ಕಲ್ಲು. ಮಣ್ಣಿನ ದಿಬ್ಬ, ಈಜಾಡುವ ಕೊಳ, ನಲಿದಾಡುವ ಕಾಡು, ಹೀಗೆ ಅವುಗಳ ತಾಣಗಳೇ ಸೊಗಸು. ಗಿಳಿ, ಹಂಸ, ಬೆಳ್ಳಕ್ಕಿ, ನವಿಲು, ಮೊದಲಾದ ಪಕ್ಷಿಗಳನ್ನು ನೋಡುವುದೇ ಕಣ್ಣಿಗೆ ಹಿತದ ಅನುಭವ.

# ಪುಷ್ಪಗಳು



















ಅಂಗೋಲ

ಅಂಗೋಲ











ಪುಷ್ಪಗಳು ನಿಸರ್ಗದ ನಗು ಎಂದು ಹೇಳುವುದು ನಿಜ. ಈ ಪುಷ್ಪಗಳಲ್ಲಿ ಲೆಕ್ಕವಿಲ್ಲದಷ್ಟು ಬಗೆಗಳಿವೆ. ಒಂದೊಂದರ ವಿನ್ಯಾಸ ಒಂದೊಂದರ ಬಣ್ಣ, ಒಂದೊಂದರ ವಾಸನೆ ಒಂದೊಂದು ಬಗೆ. ಹೂವನ್ನು ನೋಡಿದ ಯಾರೂ ಆನಂದ ಪಡದಿರಲು ಸಾಧ್ಯವಿಲ್ಲ. ಹೂಗಳಲ್ಲಿ ಮಲ್ಲಿಗೆ, ಜಾಜಿ, ಕಾಕಡ, ಕಮಲ, ತಾವರೆ, ಗುಲಾಬಿ, ಸಂಪಿಗೆ, ಶಾವಂತಿಗೆ- ಹೀಗೆ ನೂರೆಂಟು ಬಗೆ. ಭೂಮಿ ತಾಯಿಗೆ ಹಸಿರು ಮತ್ತು ಹೂವು ಉಡುಗೆ ತೊಡಿಗೆಗಳಿದ್ದಂತೆ. ಹೂವುಗಳ ಸೌಂದರ್ಯ ಅನುಭವಿಸಲು ಪುಷ್ಪಉದ್ಯಾನವನಗಳಿಗೆ ಹೋಗಬೇಕು. ಹೂ ಗಿಡದಲ್ಲೂ ಚೆಂದ, ಮುಡಿಯಲ್ಲೂ ಚೆಂದ. ಪುಷ್ಪಗಳಲ್ಲಿ ಔಷಧೀಯ ಅಂಶ ಇರುತ್ತವೆ.

# ವನಸ್ಪತಿ

























ಭಾರತ










ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಭಾರತದ ಬೇರೆ, ಬೇರೆ ಪ್ರದೇಶಗಳಲ್ಲಿ ಪ್ರಕೃತಿದತ್ತವಾದ ಔಷಧಿ ಮತ್ತು ಆಹಾರ ಸತ್ವದ - ವೈವಿಧ್ಯಪೂರ್ಣ ಹೂ, ಬಳ್ಳಿ, ಎಲೆ, ಬೇರುಗಳ ಸಮೃದ್ಧ ಸಸ್ಯಸಂಪತ್ತಿದೆ. ಆಧುನಿಕ ವೈದ್ಯಪದ್ಧತಿ ರೂಢಿಗೆ ಬರುವ ಮುನ್ನ ಈ ವನಸ್ಪತಿ ಔಷಧಿ-ಗಳನ್ನೇ ರೋಗ ಚಿಕಿತ್ಸೆಗೆ ಬಳಸಲಾಗುತ್ತಿತ್ತು. ವನಸ್ಪತಿಗಳ ಮಹತ್ವವನ್ನು ವಿಜ್ಞಾನಿಗಳೂ ಒಪ್ಪಿಕೊಂಡಿದ್ದಾರೆ.

# ಮೂಲನಿವಾಸಿಗಳು

ಟಾಂಜಾನಿಯ




ಸ್ಪೈನ್







ಕಿರ್ಗಿಸ್ಥಾನ್

ಯಾವುದೇ ದೇಶದ ಜನಾಂಗೀಯ ಅಧ್ಯಯನಕ್ಕೆ ಅಲ್ಲಿನ ಮೂಲನಿವಾಸಿಗಳ ಜೀವನ ಮುಖ್ಯವಾಗುತ್ತದೆ. ನಾಗರೀಕತೆಯ ಬೆಳವಣಿಗೆ ಹೇಗಾಯಿತೆಂಬುದನ್ನು ಗುರುತಿಸಲು ಮೂಲ-ನಿವಾಸಿಗಳ ಭಾಷೆ, ವೇಷ, ಆಹಾರ-ವಿಹಾರ ಮತ್ತಿತರ ಪದ್ಧತಿ ಪರಂಪರೆಗಳೇ ಆಧಾರವಾಗುತ್ತವೆ. ಜಗತ್ತಿನಾದ್ಯಂತ ಮೂಲನಿವಾಸಿಗಳನ್ನು ಕುರಿತ ಅಧ್ಯಯನಕ್ಕೆ ವಿಶೇಷ ಗಮನ ಕೊಡಲಾಗುತ್ತಿದೆ.

# ಗಿರಿಜನರು

ತೋಡ




ಭಿಲ್ಲ




ಮರಿಯ




ನಾಗ




ಬೆಟ್ಟ, ಗುಡ್ಡ, ಕಾಡುಗಳ ಪ್ರಾಕೃತಿಕ ಪರಿಸರದಲ್ಲೇ ವಾಸ ಮಾಡುವವರಿಗೆ ಗಿರಿಜನರು ಎನ್ನಲಾಗುತ್ತದೆ. ಆರಂಭದಲ್ಲಿ ಬೆತ್ತಲಾಗೇ ಬದುಕುತ್ತಿದ್ದ ಗಿರಿಜನರು ಕ್ರಮೇಣ ಮಿಶ ಉಡುಗೆ ಮತ್ತು ತೊಡಿಗೆ ಧರಿಸಲು ಕಲಿತರು. ಅವರದು ನಿಸರ್ಗಕ್ಕೆ ಹೊಂದಿಕೊಂಡ ಜೀವನ.


**ಗ್ರಾಮ ವಾಸಿಗಳು**. ಬುಡಕಟ್ಟಿನ ಜನ ಬದಲಾವಣೆಯು-ಸುಧಾರಣೆ ಕಂಡಂತೆಲ್ಲ ಗ್ರಾಮವಾಸಿಗಳಾಗತೊಡಗಿದ ನಂತರ ಅವರ ವೇಷ ಭೂಷಣಗಳಲ್ಲೂ ಬದಲಾವಣೆ ಕಾಣಬಹುದು. ಭಾರತದ ನಾನಾ ಭಾಗಗಳ ಗಿರಿಜನ, ಗ್ರಾಮವಾಸಿ ಮಹಿಳೆಯರ ಉಡುಗೆ ತೊಡುಗೆ ವೈವಿಧ್ಯಮಯ. ಆ ವೇಷಭೂಷಣಗಳಿಂದ ಆಯಾ ಪ್ರದೇಶದ ಬುಡಕಟ್ಟುಗಳನ್ನು ಗುರುತಿಸಬಹುದು.




ಅರುಣಾಚಲ




ಕೇರಳ




ಗುಜರಾತ್




ಲಡಾಕ್

# ಜನಪದರು



















ರವಾನ್‌ಡೈಸ್

ಜನಪದರ ವೇಷಭೂಷಣಗಳಿಂದಲೇ ಅವರು ಯಾವ ಪ್ರದೇಶಕ್ಕೆ ಸೇರಿದವರೆಂಬುದನ್ನು ಅಂದಾಜು ಮಾಡಬಹುದು. ಅವರ ವೇಷಭೂಷಣಗಳಲ್ಲಿ ಅವರದ್ದೇ ಆದ ನಂಬಿಕೆ ಅನುಸರಣೆಗಳಿರುತ್ತವೆ. ಆಧುನಿಕರ ದೃಷ್ಟಿಗೆ ಅವು ಕಲಾತ್ಮಕವಾಗೇ ಕಾಣುತ್ತವೆ.

# ಜನಜೀವನ

## ಕೆನಡ




























ಕೆನಡ ದೇಶದ ಈ ಅಂಚೆಚೀಟಿಗಳಲ್ಲಿ ಅಲ್ಲಿನ ಪೆಸಿಫಿಕ್ ಮತ್ತು ಸಬ್‌ಆರ್ಕ್‌ಟಿಕ್ ಸಮುದ್ರದಂಚಿನ ಇಂಡಿಯನ್ ಜನ ಜೀವನವನ್ನು ಸಂಕೇತಿಸುವ ಚಿತ್ರಗಳಿವೆ. ಹಾಗೆಯೇ ಆ ದೇಶದ ಐತಿಹಾಸಿಕ ಸಂದರ್ಭದ ಸ್ಮರಣೆಯ ಚಿತ್ರಗಳೂ ಇಲ್ಲಿವೆ.

# ವ್ಯವಸಾಯ

ಭಾರತ







ಬರ್ಮಾ







ಫಿಲಿಪ್ಪೈನ್ಸ್







ಬಾಂಗ್ಲದೇಶ




ಅಮೆರಿಕ








ಇಂಗ್ಲೆಂಡ್

ಎತ್ತುಗಳು ಹೊಲ ಉಳಲು ಬಳಕೆಯಾಗುತ್ತವೆ. ಗಾಡಿ ಎಳೆಯಲೂ ಬೇಕಾಗುತ್ತವೆ. ಪ್ರಾಚೀನ ಕಾಲದಿಂದಲೂ ಪ್ರಯಾಣ ಮತ್ತು ಸಾಗಾಣಿಕೆ ಸಾರಿಗೆಯ ಮಾಧ್ಯಮವೆಂದರೆ ಎತ್ತಿನ ಅಥವಾ ಕುದುರೆ ಗಾಡಿ. ಸಾಮಾನ್ಯವಾಗಿ ಜೋಡೆತ್ತುಗಳ ಗಾಡಿಗಳೇ ರೂಢಿ. ಕೆಲವು ಕಡೆ ಒಂಟೆತ್ತು ಹಾಗೂ ಒಂಟಿ ಕುದುರೆ ಗಾಡಿಗಳೂ ಇರುತ್ತವೆ. ಹಳ್ಳಿಗಾಡಿನ ಸಂಚಾರ ಸಾಗಾಣಿಕೆಗೆ ಎತ್ತಿನಗಾಡಿ ತುಂಬಾ ಉಪಯುಕ್ತ. ಗಾಡಿಯ ವಿನ್ಯಾಸದಲ್ಲೂ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯತ್ಯಾಸವಿರಬಹುದು.

# ಸಾಂಭಾರು ಪದಾರ್ಥ

ಭಾರತ




ಭಾರತ ದೇಶ ಸಾಂಬಾರು ಪದಾರ್ಥಗಳಿಗೆ ಪ್ರಸಿದ್ಧ. ಊಟ ತಿಂಡಿಗಳಿಗೆ ರುಚಿ ತಂದುಕೊಡಲು ಸಾಂಬಾರು ಪದಾರ್ಥಗಳು ಬೇಕೇ ಬೇಕು. ಲವಂಗ, ಏಲಕ್ಕಿ, ಮೆಣಸು, ಸಾಸುವೆ ಇತ್ಯಾದಿ ಕೆಲವು ಸಾಂಬಾರು ದಿನಿಸುಗಳು ಔಷಧಿ ತಯಾರಿಕೆಗೂ ಬೇಕಾಗುತ್ತವೆ. ಭಾರತದ ಕೆಲವು ಸಾಂಬಾರು ಪದಾರ್ಥಗಳು ವಿದೇಶಗಳಿಗೂ ರಫ್ತಾಗುತ್ತವೆ.

# ಹಣ್ಣು-ತರಕಾರಿ





ಗ್ರೆನೆಡ




ಇಂಗ್ಲೆಂಡ್




ನ್ಯೂಜಿಲ್ಯಾಂಡ್

ಮಾನವನ ಆಹಾರದಲ್ಲಿ ಕಾಳು ಬೇಳೆ ಎಷ್ಟು ಮುಖ್ಯವೋ ಹಣ್ಣು-ತರಕಾರಿಗಳೂ ಅಷ್ಟೇ ಮುಖ್ಯ. ಬದನೆ, ಬಾಳೆ, ಕೋಸು, ಟೊಮ್ಯಾಟೊ ಸೇಬು, ಕ್ಯಾರೆಟ್, ಮೂಲಂಗಿ, ನಿಂಬೆ, ದಾಳಿಂಬೆ, ಇತ್ಯಾದಿ ನಾನಾ ಬಗೆಯ ಹಣ್ಣು ತರಕಾರಿಗಳನ್ನು ಜಗತ್ತಿನ ಎಲ್ಲಾ ದೇಶಗಳಲ್ಲೂ ಬೆಳೆಯುತ್ತಾರೆ. ಹಣ್ಣು-ತರಕಾರಿ ದೇಹದ ಬೆಳವಣಿಗೆಗೆ ಮತ್ತು ಆರೋಗ್ಯ ರಕ್ಷಣೆಗೆ ಅತ್ಯಂತ ಅಗತ್ಯ.

# ಸಾಂಸ್ಕೃತಿಕ

ಭಾರತ - ಜಪಾನ್




ಭಾರತ-ಮೆಕ್ಸಿಕೊ







ಭಾರತ-ಸೈಪ್ರಸ್

ಭಾರತ ಜೊತೆಗೂಡಿ ಜಪಾನ್, ಮೆಕ್ಸಿಕೊ, ಸೈಪ್ರಸ್ ದೇಶಗಳು ಹೊರತಂದ ಅಂಚೆ ಚೀಟಿಗಳು ಆಯಾದೇಶದ ಪರಂಪರೆಯ ಸಾಂಸ್ಕೃತಿಕ ಪ್ರದರ್ಶನ ಕಲೆಗಳನ್ನು ಚಿತ್ರಿಸುತ್ತವೆ. ಈ ಕಲೆಗಳ ವೇಷಭೂಷಣಗಳು- ವಾದ್ಯ ವಿಶೇಷಗಳು ವರ್ಣಮಯ,ವೈವಿಧ್ಯಮಯ.

# ಕರಕುಶಲ ಕಲೆ-೧

ಭಾರತ







ಭಾರತ

















ಶ್ರೀಲಂಕಾ

ಇಂಗ್ಲೆಂಡ್







ಕುವೈತ್




ಕೆನಡ




ಜರ್ಮನಿ




ಸ್ವಿಟ್ಜರ್‌ಲ್ಯಾಂಡ್




ಕೆನಡ

ಕರಕುಶಲ ಕಲೆಗಳೆಂದರೆ ಅಲಂಕಾರ ವಸ್ತುಗಳು. ಮೇಜಿನ ಮೇಲೋ, ಗೋಡೆಯ ಮೇಲೋ ಅಥವಾ ಪ್ರದರ್ಶನ ಕಪಾಟಿನಲ್ಲಿಡಲೋ ಈ ವಸ್ತುಗಳನ್ನು ಬಳಸಲಾಗುತ್ತದೆ. ಈ ಕಲೆಗಾರಿಕೆಗೆ ಮಣ್ಣು, ಮರ, ಕಲ್ಲು, ಚಿಪ್ಪು, ಗಾಜು, ಬಟ್ಟೆ, ರಬ್ಬರ್, ಪ್ಲಾಸ್ಟಿಕ್ ಇತ್ಯಾದಿಗಳು ಬಳಕೆಯಾಗುತ್ತವೆ.

# ಕರಕುಶಲ ಕಲೆ-೨




ಅಮೆರಿಕಾ




ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ವಸ್ತ್ರ ಮತ್ತಿತರ ನಿತ್ಯೋಪಯೋಗಿ ವಸ್ತುಗಳ ಆಕರ್ಷಣೆಗಾಗಿ ವರ್ಣಮಯ, ಕಲಾತ್ಮಕ ವಿನ್ಯಾಸಗಳನ್ನು ಮಾಡಲಾಗುತ್ತದೆ. ಸಾಮಾನ್ಯವಾಗಿ ಕರಕುಶಲ ವಸ್ತುಗಳ ತಯಾರಿಕೆ ಎಲ್ಲ ದೇಶಗಳಲ್ಲೂ ನಡೆಯುತ್ತದೆ. ಅಲಂಕಾರದ ವಸ್ತುಗಳ ತಯಾರಿಕೆ ಒಳ್ಳೆಯ ವಾಣಿಜ್ಯೋದ್ಯಮವೂ ಆಗಿದೆ. ಪಕ್ಷಿ, ಪ್ರಾಣಿ, ಜಂತು, ಜಲಚರಗಳೇ ಕರಕುಶಲ ವಸ್ತುಗಳಿಗೆ ಮಾದರಿ.

# ಕರಕುಶಲ ಕಲೆ-೨




ಅಮೆರಿಕಾ










ಅಮೆರಿಕಾ ಎಷ್ಟೇ ಆಧುನಿಕ ಎಂದರೂ ಪರಂಪರೆಯ ಜನಪದ - ಕರಕುಶಲ ಕಲೆಗಳನ್ನು ಕೈಬಿಟ್ಟಿಲ್ಲ. ಮರದ ಕೆತ್ತನೆ, ರೇಖಾ ಚಿತ್ರ, ಪಿಂಗಾಣಿ ಬಳಕೆ ವಸ್ತುಗಳ ಮೇಲಿನ ವಿನ್ಯಾಸ, ಇವುಗಳ ರೂಪದಲ್ಲಿ ಅಲ್ಲಿನ ಜನಪದ ಕಲೆಯ ವೈಶಿಷ್ಟ್ಯವನ್ನು ಉಳಿಸಿಕೊಂಡು ಬರಲಾಗಿದೆ.










ಅಮೆರಿಕಾ



# ಕರಕುಶಲ ಕಲೆ-೪




ಜಪಾನ್
























ಜಪಾನ್

ಜಗತ್ತಿನ ಬೃಹತ್ ಕೈಗಾರಿಕಾ ರಾಷ್ಟ್ರ ಜಪಾನ್ ಅಲಂಕಾರದ ಕುಶಲ ಕೈಗಾರಿಕೆಗೂ ಪ್ರಸಿದ್ಧ. ಮೇಜಿನ ಮೇಲಿಡುವ, ಗೂಡು-ಗಳಲ್ಲಿಡುವ ವರ್ಣಮಯ ಆಕೃತಿಗಳ ರಚನೆಗೆ ಜಪಾನಿಯರು ಸಿದ್ಧಹಸ್ತರು. ಈ ಆಕೃತಿಗಳನ್ನು ತಯಾರಿಸಲು ಅವರು ಅಲ್ಲಿನ ಪಕ್ಷಿ, ಪ್ರಾಣಿ-ಗಳು, ಮನುಷ್ಯರು ಅಥವಾ ಪೌರಾಣಿಕ ಪ್ರಸಂಗಗಳ ಯಾವುದಾದರೂ ಸಂದರ್ಭ ಚಿತ್ರಗಳನ್ನು ಮಾದರಿಯಾಗಿಟ್ಟುಕೊಳ್ಳುತ್ತಾರೆ.

# ಮಡಕೆ ಕುಡಿಕೆ.

ಸೃಷ್ಟಿಯ ಸಕಲ ಜೀವರಾಶಿಗಳೂ ಬದುಕಿರುವುದು ಮಣ್ಣಿನಿಂದ. "ಮಣ್ಣುಬಿಟ್ಟರೆ ಇನ್ನಿಲ್ಲ" ಎಂಬ ಗಾದೆ-ಮಾತೇ ಇದೆ. ಗಿಡ, ಮರ ಬೆಳೆಯಲು ಮಣ್ಣು ಬೇಕು, ಮಡಕೆ ಕುಡಿಕೆ ಮಾಡಲು ಮಣ್ಣು ಬೇಕು. ಅಷ್ಟೇ ಅಲ್ಲ, ಬಣ್ಣಬಣ್ಣದ ಮಣ್ಣಿನಿಂದ ಅಲಂಕಾರದ ವಸ್ತುಗಳನ್ನು ಮಾಡಬಹುದು. ಪ್ರಪಂಚದ ಎಲ್ಲ ದೇಶಗಳೂ ಮಣ್ಣಿನ ಮಡಕೆಗಳನ್ನು ಬಳಸುತ್ತವೆ. ಮಡಕೆಯಲ್ಲಿ ಮಾಡಿದ ಅಡುಗೆ ಆರೋಗ್ಯಕರ. ಕಾಳು ಬೇಳೆಗಳ ಸಂಗ್ರಹಕ್ಕೂ ಅನುಕೂಲಕರ. ಮಣ್ಣಿನಿಂದಾದ ಈಚಿನ ಪಿಂಗಾಣಿ ವಸ್ತುಗಳಂತೂ ಶೃಂಗಾರ ವಸ್ತುಗಳಾಗಿ ಜನಪ್ರಿಯವಾಗಿವೆ.

ಟಾಂಜಾನಿಯ





ಬೆಲಾರೂಸ್





ರೊಮಾನಿಯ




ಲೆಸೊತೊ








ಇರಾನ್

# ಚಿತ್ರ ಕಲೆ




ಭಾರತ / ಮಂಗೋಲಿಯ ದೇಶಗಳು ಸಂಯುಕ್ತವಾಗಿ - ಹೊರತಂದ ಈ ಅಂಚೆ ಚೀಟಿಗಳು ಕುದುರೆಯ ಪ್ರಾಚೀನ - ಕಲಾ ಚಿತ್ರಗಳು




ಪಾಕಿಸ್ತಾನ

ವಿಭಜನೆಗೆ ಮುನ್ನ ಭಾರತದಲ್ಲಿದ್ದ ಹರಪ್ಪ- ಮೊಹೆಂಜದಾರೋ ಅತ್ಯಂತ ಪ್ರಾಚೀನ ಇತಿಹಾಸದ ವಿಶ್ವಪ್ರಸಿದ್ಧ ಸ್ಥಳಗಳು. ಇಲ್ಲಿ ನಡೆ- ದಿರುವ ಭೂಶೋಧದಿಂದ ಅನೇಕ ಮಹತ್ವದ ಅವಶೇಷಗಳು ದೊರಕಿವೆ.




ಭಾರತ

ಕೋಳಿ ಕಾಡಿನಲ್ಲೂ ಇರುತ್ತದೆ, ನಾಡಿನಲ್ಲೂ ಇರುತ್ತದೆ. ನವಿಲು ಅರಣ್ಯದಲ್ಲಿದ್ದರೂ ಅದನ್ನು ಹವ್ಯಾಸಕ್ಕೆ ಜನ ಸಾಕುವುದುಂಟು.

# ವಿನ್ಯಾಸ ಕಲೆ-೧

ಇರಾನ್




ಹಂಗೇರಿ




ಸ್ವಿಟ್ಜರ್ಲ್ಯಾಂಡ್










ಕೆನಡ










ನ್ಯೂಜಿಲ್ಯಾಂಡ್

ಆಕರ್ಷಣೆಗಾಗಿ ಬಟ್ಟೆಗಳ ಮೇಲೆ, ಬಳಸುವ ಪಾತ್ರೆ ಪರಡಿಗಳ ಮೇಲೆ, ಗೋಡೆಗಳ ಮೇಲೆ ವಿವಿಧ ವಿನ್ಯಾಸದ ಬಣ್ಣಬಣ್ಣದ ಕುಸುರಿಕಲೆ ಬಿಡಿಸುವುದು ಸಾಮಾನ್ಯ. ಈ ಕುಸುರಿ ಚಿತ್ರಗಳು ಒಂದೊಂದು ದೇಶದಲ್ಲಿ ಒಂದೊಂದು ಶೈಲಿಯಲ್ಲಿರುತ್ತವೆ. ಗಾಜು ಪಿಂಗಾಣಿ, ಮರದ ವಸ್ತುಗಳ ಮೇಲಿನ ಈ ಕುಸುರಿ ಕೆಲಸ ಕಣ್ಣಿಗೆ ಆನಂದ ನೀಡುತ್ತವೆ.

# ವಿನ್ಯಾಸ ಕಲೆ-೨




ಅಮೆರಿಕಾ

ಅಮೆರಿಕಾ ಜಗತ್ತಿನ ಒಂದು ಶ್ರೀಮಂತ ರಾಷ್ಟ್ರ. ಪ್ರಾಚೀನತೆಯ ದೃಷ್ಟಿಯಿಂದ ಈ ರಾಷ್ಟ್ರಕ್ಕೆ ವಿಶೇಷವಾದ ಇತಿಹಾಸವೇನೂ ಇಲ್ಲ. ಆದರೂ ಆರ್ಥಿಕ ಪ್ರಗತಿ ಅದನ್ನು ಒಂದು ಪ್ರಬಲ ರಾಷ್ಟ್ರವನ್ನಾಗಿ ಮಾಡಿದೆ. ಅಮೆರಿಕಾ ಅತ್ಯಾಧುನಿಕ ದೇಶವಾದರೂ ಪರಂಪರೆಯ ಜಾನಪದದ ಬಗೆಗೆ ಅಲ್ಲಿ ತುಂಬ ಮಾನ ಮನ್ನಣೆಗಳಿವೆ. ಜಾನಪದ ವಸ್ತುಸಂಗ್ರಹಾಲಯಗಳು ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ. ಕೈಬುಟ್ಟಿಯ ವಿವಿಧ ವಿನ್ಯಾಸದ ಕಲೆಯನ್ನು ಈ ಅಂಚೆಚೀಟಿಗಳಲ್ಲಿ ಕಾಣಬಹುದು.

# ವಿನ್ಯಾಸ ಕಲೆ-೩




ದಕ್ಷಿಣ ಆಫ್ರಿಕ




ಜನಪದರು ಚಿತ್ರಕಲೆಯಲ್ಲಿ ತರಗತಿ- ತರಬೇತಿ ಪಡೆದವರೇನಲ್ಲ. ಆದರೂ ತಮ್ಮದೇ ಆದ ಹುಟ್ಟು ಪ್ರತಿಭೆಯಿಂದ ವೈವಿಧ್ಯಪೂರ್ಣ ಕಲಾ ವಿನ್ಯಾಸಗಳನ್ನು ರಚಿಸಬಲ್ಲರು. ಈ ವಿನ್ಯಾಸಗಳು ನೆಲಹಾಸಿನ ಹಲಗೆ, ಗೋಡೆ, ಬಾಗಿಲು, ಮೇಲ್ಛಾವಣಿ, ತೊಡುವ ಬಟ್ಟೆ ಭಿತ್ತಿಗಳ ಮೇಲೆ ಬಳಕೆಯಾಗುತ್ತವೆ.

# ಭಿತ್ತಿ ಚಿತ್ರಗಳು

## ಶ್ರೀಲಂಕಾ

























ಒಂದು ಕಾಲದಲ್ಲಿ ಭಾರತ ಖಂಡದ ಭಾಗವಾಗಿದ್ದ ಸಿಂಹಳ ಒಂದು ಸುಂದರ ದ್ವೀಪ. ಅದೀಗ ಶ್ರೀಲಂಕಾ ಎಂದು ಹೆಸರಾಗಿರುವ ಸ್ವತಂತ್ರ ರಾಷ್ಟ್ರ. ಬೌದ್ಧಧರ್ಮ ಮತ್ತು ಸಂಬಂಧಿತ ಇತಿಹಾಸ ಪುರಾಣಗಳ ಸಂದರ್ಭಗಳನ್ನು ಅಲ್ಲಿನ ಭಿತ್ತಿ ವರ್ಣ ಚಿತ್ರಗಳಲ್ಲಿ ನೋಡಬಹುದು. ಶ್ರೀಲಂಕಾದ ಕೆಲವು ಅಂಚೆಚೀಟಿಗಳು ಜಗತ್ಪ್ರಸಿದ್ಧ ರಾಮಾಯಣಕ್ಕೆ ಸಂಬಂಧಿಸಿದಂತೆಯೂ ಇವೆ.

# ಚದುರಂಗ

ಮಂಗೋಲಿಯ










ವಿಯೆಟ್ನಾಂ




ಮನರಂಜನೆಯ ಆಟಗಳಲ್ಲಿ ಚದುರಂಗದ ಆಟ ತುಂಬ ಪ್ರಾಚೀನವಾದದ್ದು. ಚದುರಂಗದ ಹಾಸಿನ ಮೇಲೆ ಆಡಿಸುವ ಸಾಧನಕ್ಕೆ "ಕಾಯಿ" ಎನ್ನುತ್ತಾರೆ. ನಮ್ಮ ಜನ ಈ "ಕಾಯಿ"ಗೂ ಕಲೆಯ ರೂಪ ಕೊಡುತ್ತಾರೆ. ಆಡುವ ಆಟಕ್ಕೂ ನೋಡುವ ನೋಟಕ್ಕೂ ಅಂದದ ಅನುಭವ ನೀಡುತ್ತಾರೆ. ಸಾಮಾನ್ಯವಾಗಿ ಆನೆ ಕುದುರೆ, ಗೂಳಿ ಮೊದಲಾದ ಪ್ರಾಣಿಗಳ ರೂಪ ಕೊಡುತ್ತಾರೆ. ಇವುಗಳ ತಯಾರಿಕೆಗೆ ಮರ, ಪಿಂಗಾಣಿ, ಗಾಜು ಮೊದಲಾದವನ್ನು ಬಳಸುತ್ತಾರೆ.

# ರಂಗೋಲಿ

## ಭಾರತ
















ವಾಸದ ಮನೆಯ ನೆಲದ ಮೇಲೆ, ಮನೆಯ ಮುಂದಿನ ಅಂಗಳದಲ್ಲಿ ಅಲಂಕಾರಕ್ಕಾಗಿ ರಂಗೋಲಿ ಬಿಡುವುದು ಸಾಮಾನ್ಯ. ಅದೊಂದು ಸೃಜನಶೀಲ ಕುಶಲಕಲೆ. ರಂಗೋಲಿಯಲ್ಲಿ ವರ್ಣಮಯ ವಿನ್ಯಾಸದ ಚಿತ್ರಗಳಿರುತ್ತವೆ. ರಂಗೋಲಿ ಬಿಡಿಸಲು ಕಲ್ಲಿನಪುಡಿ, ಹಿಟ್ಟು ಮೊದಲಾದವನ್ನು ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ರಂಗೋಲಿ ಕಲೆ ಸ್ತ್ರೀಯರ ಕಲೆಯೆಂದೇ ಹೆಸರಾಗಿದೆ. ಭಾರತದಲ್ಲಂತೂ ರಂಗೋಲಿ ತುಂಬ ಪ್ರಾಚೀನ ಕಾಲದಿಂದಲೂ ಉಳಿದು ಕೊಂಡು ಬಂದಿರುವ ವರ್ಣರಂಜಿತ ಕಲೆ.

# ಗ್ರಾಮೀಣ ಕಸಬುಗಳು-೧




ಈಜಿಪ್ಟ್




ಥಾಯ್‌ಲ್ಯಾಂಡ್




ಜಾಂಬಿಯ




ರೊಮಾನಿಯ




ಲೆಬೆನಾನ್




ಮಾಲಿ




ಮಾಲಿ

ಡೊಹೊಮೆ







ಜಾಂಬಿಯ

ಯುಗಯುಗಗಳಿಂದ ಮಾನವರಿಗೆ ತಮ್ಮ ಕಸಬುಗಳು ಸ್ವಾವಲಂಬನೆಯ ಮೂಲಗಳಾಗಿವೆ. ಕುಂಬಾರಿಕೆ, ಕಮ್ಮಾರಿಕೆ ನೇಕಾರಿಕೆ, ಅಕ್ಕಸಾಲಿಕೆ, ಮರಗೆಲಸ ಇತ್ಯಾದಿ ಹತ್ತಾರು ಬಗೆಯ ಕಸಬುಗಳು ಅವರ ಜೀವನಾಧಾರವಾಗಿವೆ. ಇವೆಲ್ಲ ಕೃಷಿ ಕಸುಬಿಗೆ ಪೂರಕವಾಗಿವೆ.


# ಗ್ರಾಮೀಣ ಕಸಬುಗಳು-೨




ಕಾಂಗೊ




ದಹೊಮೆ








ದಹೊಮೆ

ಸೆನೆಗಾಲ್




ಚಾಡ್







ಬೆಲ್ಜಿಯಂ




ಮಾಲಿ




ಸೆನೆಗಾಲ್




ಯಾವುದೇ ದೇಶದಲ್ಲಿ ಪ್ರಧಾನ ಕಸುಬು ಏನೇ ಇದ್ದರೂ ಅದಕ್ಕೆ ಪೂರಕವಾಗಿ ಇತರ ಕಸಬುಗಳೂ ಇರುತ್ತವೆ. ಕೆಲವರಿಗೆ ಅಂತಹ ಕಸಬುಗಳೇ ಜೀವನಕ್ಕೆ ಮುಖ್ಯ ಆಧಾರ. ಸಾಮಾನ್ಯವಾಗಿ ಕೃಷಿಯ ಜೊತೆಗೆ ಇತರ ಕಸಬು-ಗಳು ಎಲ್ಲ ದೇಶಗಳ ಗ್ರಾಮೀಣ ಪ್ರದೇಶದಲ್ಲೂ ಇರುತ್ತವೆ. ಇಲ್ಲಿರುವ ಅಂಚೆ ಚೀಟಿಗಳು ವಿವಿಧ ದೇಶಗಳ ಅಂತಹ ಕಸುಬುಗಳ ಚಿತ್ರಗಳು.

# ಮಾದರಿಗಳ ಕಲೆ




ಅಮೆರಿಕ




ಅಮೆರಿಕ ದೇಶವು ಜನಪದ ಕಲೆಗೂ ಮನ್ನಣೆ ನೀಡಿರುವುದಕ್ಕೆ ತನ್ನ ಅಂಚೆ ಚೀಟಿಗಳಲ್ಲಿ ಭಾರತದ ಕೆಲವು ಮುಖವಾಡಗಳ ಚಿತ್ರಗಳನ್ನು ಬಳಸಿರುವುದೇ ಸಾಕ್ಷಿ. ಮುಖವಾಡಗಳಲ್ಲಿ ಒಂದೊಂದಕ್ಕೂ ಒಂದೊಂದು ಹಿನ್ನೆಲೆಯಿರುತ್ತದೆ. ಮಕ್ಕಳಾಟದ ಮುಖವಾಡಗಳು, ರಂಗಾಭಿನಯ-ಮುಖವಾಡಗಳು, ಮನರಂಜನೆಯ ಮುಖವಾಡಗಳು. ದೈವಾರಾಧನೆಯ ಮುಖವಾಡಗಳು, ಹೀಗೆ ಮುಖವಾಡಗಳ ನಾನಾ ಬಗೆ.







ಬಾತು ಕೋಳಿಯ ವಿವಿಧ ರೂಪಗಳು

# ಗ್ರಾಮೀಣ ಕರಕುಶಲ ಕಲೆ




ಕೆನಡ




ನ್ಯೂಜಿಲ್ಯಾಂಡ್




ಹಂಗೇರಿ




ಐರ್ಲ್ಯಾಂಡ್










ಬಾಂಗ್ಲದೇಶ




ಕ್ಯೂಬ







ಕ್ಯೂಬ

ವಿಶ್ವದ ಎಲ್ಲ ದೇಶಗಳಲ್ಲಿ ಕಂಡು ಬರುವ ಗ್ರಾಮೀಣರ ಪರಂಪರೆಯ ಕರಕುಶಲ ಕಲೆ ಅದ್ಭುತವಾದುದು. ಮಣ್ಣು, ಕಲ್ಲು, ಮರಗಳನ್ನು ಬಳಸಿ ರಚಿಸುವ ಅಲಂಕಾರಿಕ ಮತ್ತು ಕಲಾತ್ಮಕ ವಸ್ತುಗಳು ಆಧುನಿಕ ಕಾಲದಲ್ಲೂ ಆಕರ್ಷಣೆ ಉಳಿಸಿಕೊಂಡಿದೆ.

# ಪ್ರದರ್ಶನ ಕಲೆ    ಜಪಾನ್



















ಜಪಾನ್ ಒಂದು ದ್ವೀಪ ರಾಷ್ಟ್ರ. ಅಲ್ಲಿನ ಜನ ತುಂಬ ಸಾಹಸಿ-ಗಳು ಮತ್ತು ಕ್ರಿಯಾಶೀಲರು. ಅದು ನೈಸರ್ಗಿಕ ಮತ್ತು ಇತರ ಅಡ್ಡಿ-ಆತಂಕಗಳ ಮಧ್ಯೆಯೂ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಪ್ರಗತಿ ಹೊಂದಿರುವ ದೇಶ. ಅಲ್ಲಿನ ಪರಂಪರೆಯ ಕಲಾಸಂಪತ್ತು ವೈವಿಧ್ಯಮಯವಾಗಿದೆ.

# ಗೊಂಬೆಯಾಟ





ಜರ್ಮನಿ




ಭಾರತ




ಜಪಾನ್







ಇಂಗ್ಲೆಂಡ್




ಗೊಂಬೆಯಾಟದ ಪರಂಪರೆ ವಿಶ್ವದ ಎಲ್ಲ ಕಡೆಯೂ ಕಂಡು ಬರುತ್ತದೆ. ಭಾರತದಲ್ಲಿ ತೊಗಲು ಗೊಂಬೆ, ಕೀಲು ಗೊಂಬೆ, ಸೂತ್ರದ ಗೊಂಬೆ ಇತ್ಯಾದಿ ಪ್ರಕಾರಗಳಿವೆ. ಸೂತ್ರದ ಗೊಂಬೆಗಳನ್ನು ಮರದಿಂದ ಮಾಡಿದರೆ, ತೊಗಲು ಗೊಂಬೆಗಳನ್ನು ಚರ್ಮದಿಂದ ಮಾಡುತ್ತಾರೆ. ಗೊಂಬೆಯಾಟ ಬಯಲಾಟದಂತೆ ರಾತ್ರಿಹೊತ್ತು ನಡೆಯುತ್ತದೆ. ನಾಟಕಗಳಲ್ಲಿ ಬರುವ ಪಾತ್ರಗಳಿಗೆ ತಕ್ಕಂತೆ ಗೊಂಬೆಗಳ ರೂಪಗಳಿರುತ್ತವೆ.

# ಮಕ್ಕಳ ಚಿತ್ರಕಲೆ

## ಭಾರತ




ಮಕ್ಕಳ ದಿನಾಚರಣೆ ಸಂದರ್ಭದಲ್ಲಿ ಭಾರತ ದೇಶ ಹೊರತಂದಿರುವ ಮಕ್ಕಳಿಗೆ ಮುದಕೊಡುವ ಚಿತ್ರಗಳ ಅಂಚೆಚೀಟಿಗಳಿವು. ಇವುಗಳಲ್ಲಿ ಕೆಲವು ಪ್ರತಿಭಾವಂತ ಮಕ್ಕಳೇ ಚಿತ್ರಿಸಿದವುಗಳಾಗಿರುತ್ತವೆ. ಕಾಯಿ ಸಂದೇಶವೂ ಇರುತ್ತದೆ. ಇಲ್ಲಿರುವ ಅಂಚೆಚೀಟಿಗಳಲ್ಲಿ ಯೂನಿಸೆಫ್ ಸ್ಥಾಪನಾ ಸ್ಮರಣೆಯ ಚಿತ್ರವೂ ಇದೆ.

# ಆಟಿಕೆಗಳು










ಭಾರತ







ಅಮೇರಿಕ




ಜರ್ಮನಿ










ಕೆನಡ

ಮಕ್ಕಳಿಗೆ ಆಟದ ಸಾಮಾನುಗಳು ಎಂದರೆ ತುಂಬ ಆಸೆ. ಬೊಂಬೆ ಮತ್ತು ಇತರ ವಸ್ತುಗಳ ರೂಪದಲ್ಲಿರುವ ಆಟಿಕೆಗಳೊಡನೆ ಮಕ್ಕಳು ನಕ್ಕು ನಲಿಯುತ್ತವೆ. ಈ ಆಟಿಕೆಗಳನ್ನು ಮರ, ಮಣ್ಣು, ಗಾಜು, ಲೋಹ, ಬಟ್ಟೆ, ಹತ್ತಿ ಇತ್ಯಾದಿಗಳಿಂದ ತಯಾರಿಸಲಾಗುತ್ತದೆ. ಕರ್ನಾಟಕದಲ್ಲಿ ಚನ್ನಪಟ್ಟಣ ಈ ಆಟಿಕೆ ವಸ್ತುಗಳ ತಯಾರಿಕೆಗೆ ಪ್ರಸಿದ್ಧ. ಅಳುವ ಮಕ್ಕಳಿಗೆ ಆಟದ ಸಾಮಾನು ಕೊಟ್ಟರೆ ಸಾಕು ಅಳುವುದನ್ನು ನಿಲ್ಲಿಸಿ ನಕ್ಕುಬಿಡುತ್ತವೆ.

# ದೇಸಿ ಆಟಗಳು







ಸ್ವಿಟ್ಜರ್ ಲ್ಯಾಂಡ್







ಬಾಂಗ್ಲದೇಶ




ಟ್ಯಾಂಜಾನಿಯ




ಲೈಬೀರಿಯ

ಗ್ರಾಮೀಣ ಜನರಿಗೆ ಅದರಲ್ಲೂ ಮಕ್ಕಳಿಗೆ ಮನರಂಜನೆಯ ಮಾಧ್ಯಮ-ಗಳೆಂದರೆ ದೇಸಿ ಆಟಗಳು. ಜಗತ್ತಿನ ಎಲ್ಲದೇಶಗಳಲ್ಲೂ ಕೊಕ್ಕೊ,-ಸಿಳ್ಳಂಹಟ್ಟಿ, ಚಿನ್ನಿದಾಂಡು, ಮಲ್ಲಕಂಭ, ಹಗ್ಗದಾಟ, ಚಿನ್ನಿಕೋಲು, ಬುಗರಿ ಇತ್ಯಾದಿ ನೂರಾರು ಬಗೆಯ ಈ ದೇಸಿ ಆಟಗಳು ಕಣ್ಮರೆಯಾಗುತ್ತಿವೆ. ವಿಶೇಷವೆಂದರೆ, ಈ ದೇಸಿ ಆಟಗಳಿಗೆ ಆಧುನಿಕ ಕ್ರೀಡೆಗಳಿಗೆ ಬೇಕಾದಂತೆ ದೊಡ್ಡ ಮೈದಾನವಾಗಲಿ, ಬೆಲೆಬಾಳುವ ಕ್ರೀಡಾ ಉಪಕರಣಗಳಾಗಲಿ ಬೇಕಾಗುವುದಿಲ್ಲ.

# ವಾದ್ಯಗಳು - ೧




ಮೊಝಾಂಬಿಕ್







ನೇಪಾಳ








ಇಸ್ರೇಲ್

ಒಂದೊಂದು ದೇಶದಲ್ಲಿ ಒಂದೊಂದು ಬಗೆಯ, ಒಂದೊಂದು ಹೆಸರಿನ ಸಂಗೀತ ವಾದ್ಯಗಳು. ಈ ವಾದ್ಯಗಳು ಗಾಯನಕ್ಕೆ ಶ್ರುತಿ ಮತ್ತು ತಾಳವನ್ನು ಒದಗಿಸುತ್ತವೆ. ಮರ, ಲೋಹ, ಪ್ರಾಣಿಚರ್ಮ, ತಂತಿ, ಬಿದಿರು ಬೊಂಬು, ಸೋರೆ ಬುರುಡೆಗಳಿಂದ ಈ ವಾದ್ಯಗಳು ತಯಾರಾಗುತ್ತವೆ. ಇವುಗಳ ಆಕಾರ ಧ್ವನಿಗಳಲ್ಲಿ ಎಷ್ಟೋ ವ್ಯತ್ಯಾಸವಿರುತ್ತದೆ.

# ವಾದ್ಯಗಳು - ೨

ಮಾಲಿ ಟ್ಯಾಂಜಾನಿಯ

ರೊಮಾನಿಯ ಟಾಂಜಾನಿಯ ಕಾಂಪೂಚಿಯ ರವಾಂಡಾ ಚಾಡ್ ಸ್ವಿಟ್ಜರ್‌ಲ್ಯಾಂಡ್ ಸಿಂಗಪೂರ್ ಭೂತಾನ್ ಮಾಲಿ ಆಂಟಿಗುವಾ ಬಾಂಗ್ಲಾದೇಶ




ಮಾನವ ತನ್ನ ಮನರಂಜನೆಗಾಗಿ ಸೃಷ್ಟಿಸಿಕೊಂಡ ಮಾಧ್ಯಮಗಳಲ್ಲಿ ಸಂಗೀತವೂ ಒಂದು. ಆ ಸಂಗೀತ ವಾದ್ಯಸಂಗೀತ, ಗಾಯನ ಎರಡು ಬಗೆ. ಗಾಯನಕ್ಕೆ ವಾದ್ಯಸಂಗೀತದ ಶೃತಿ ತಾಳಗಳ ಪಕ್ಕವಾದ್ಯಗಳ ಮೇಳ ಅಗತ್ಯವಾಗುತ್ತದೆ. ಸಂಗೀತದ ಸೌಂದರ್ಯ ವರ್ಧಕಗಳೇ ವಾದ್ಯಗಳು.

# ಜನಪದ ನೃತ್ಯ-೧




ವಲಾರ್




ವೆಲಾಕಲಿ




ಹೊಜಗಿರಿ.




ಕಯಾಡ್

ಭಾರತ

ಜನಪದ ಕುಣಿತಗಳು
ಹಳ್ಳಿಗರು ಮತ್ತು ಗುಡ್ಡಗಾಡಿನ
ಜನರ ಹರ್ಷೋಲ್ಲಾಸಗಳ
ಅಭಿವ್ಯಕ್ತಿ. ಹಬ್ಬಹರಿದಿನಗಳಲ್ಲಿ
ಹಾಗೂ ತೇರು ಉತ್ಸವಗಳಲ್ಲಿ
ಸಾಮೂಹಿಕವಾಗಿ
ಆಯಾ ಪ್ರದೇಶಕ್ಕೆ
ವಿಶಿಷ್ಟವಾದ ವರ್ಣಮಯ
ವೇಷ- ಭೂಷಣ ಧರಿಸಿ
ವಿವಿಧ ವಾದ್ಯಗಳನ್ನು
ನುಡಿಸುತ್ತ, ಹಾಡುತ್ತ
ವಿವಿಧ ಭಂಗಿಗಳಲ್ಲಿ
ಕುಣಿಯುವುದನ್ನು
ನೋಡುವುದೇ ಕಣ್ಣಿಗೆ ಹಬ್ಬ.
ಭಾರತದ ನಾನಾ
ಭಾಗಗಳಲ್ಲಿ ನೂರಾರು ಬಗೆಯ
ಜನಪದ ಕುಣಿತಗಳಿದ್ದು
ಇಲ್ಲಿ ವಲಾರ್
ವೇಲಾಕಲಿ, ಹೊಜಗಿರಿ
ಕಯಾಡ್ ಕುಣಿತಗಳ
ಚಿತ್ರಗಳಿವೆ.

# ಜನಪದ ನೃತ್ಯ - ೨

ಜನಪದ ನೃತ್ಯಗಳು ಜಗತ್ತಿನಾದ್ಯಂತ ಪ್ರಚಲಿತವಾಗಿವೆ. ಒಂದೊಂದು ದೇಶದಲ್ಲೂ ಆಯಾದೇಶದ ಒಂದೊಂದು ಪ್ರದೇಶದಲ್ಲೂ ಒಂದೊಂದು ಬಗೆಯ ದೇಸಿ ನೃತ್ಯಗಳಿವೆ. ಇವುಗಳಲ್ಲಿ ಕೆಲವಕ್ಕೆ ಧಾರ್ಮಿಕ ಆಚರಣೆಗಳ ಹಿನ್ನೆಲೆ ಇದ್ದರೆ, ಇನ್ನೂ ಕೆಲವು ಕೇವಲ ಮನರಂಜನೆಯ ಕಲೆಗಳಾಗಿವೆ. ಜನಪದ ನೃತ್ಯಗಾರರ ವೇಷ-ಭೂಷಣಗಳು ವರ್ಣಮಯವು. ಸ್ತ್ರೀ, ಪುರುಷರು ಬೇರೆ ಬೇರೆಯಾಗಿ ಮಾಡುವ ನೃತ್ಯಗಳಿರುವಂತೆ, ಕೂಡಿ ಕುಣಿಯುವ ನೃತ್ಯಗಳೂ ಇರುತ್ತವೆ. ಈ ಜನಪದ ಕಲೆಗಳು ಸಾಂಸ್ಕೃತಿಕ ಜಗತ್ತಿನ ಬಹು ದೊಡ್ಡ ಸಂಪತ್ತು.




ದಹೋಮೆ




ಗಿನಿಯ




ಗಿನಿಯ







ಮಂಗೋಲಿಯ




ಕೆನಡ




ಡೊಮಿನಿಕ




ಜರ್ಮನಿ

# ನೃತ್ಯಗಳು

ಕಾಂಪೂಚಿಯ




ಮಂಗೋಲಿಯ




ಥಾಯ್‌ಲ್ಯಾಂಡ್




ರಷ್ಯಾ







ಮಾಂಟ್‌ಸೆರಟ್







ಹಾಡು, ಕುಣಿತಗಳು ಮಾನವ ತನ್ನ ವಿಕಾಸದೊಂದಿಗೆ ರೂಢಿಸಿಕೊಂಡು ಬಂದಿರುವ ಕಲೆಗಳು. ಅನೇಕ ದೇಶಗಳಲ್ಲಿ ತಲೆಮಾರುಗಳಿಂದ ಬಂದ ಕಲೆಗಳನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆದಿದೆ. ಜನಪದ ನೃತ್ಯ ಕಲೆಗಳು ತುಂಬ ವರ್ಣಮಯ ಹಾಗೂ ವೈಶಿಷ್ಟ್ಯಪೂರ್ಣ. ಈಚೀಚೆಗೆ ಪರಂಪರೆಯ ಕಲೆಗಳಲ್ಲಿ ಆಧುನಿಕತೆಯ ಛಾಯೆ ಕವಿಯುತ್ತಿದೆ.

# ವೇಷ-ಭೂಷಣ - ೧

ರೊಮಾನಿಯ
















ಕೆಲವು ದೇಶಗಳ ಜನ ಧರಿಸುವ ಉಡುಗೆ-ತೊಡುಗೆಗಳಿಂದ ಅವರು ಇಂತಹ ದೇಶದವರೆಂದು ಅಂದಾಜು ಮಾಡಬಹುದು. ಕಾಲ ಬದಲಾದಂತೆ ಮೂಲ ಶೈಲಿಗಳೆಲ್ಲ ಮಾಯವಾಗಿ ಹೊಸ-ಹೊಸ ವೇಷ-ಭೂಷಣಗಳು ರೂಢಿಗೆ ಬಂದಿವೆ. ಎಷ್ಟೋ ಕಡೆ ಹಿಂದಿನ ಕಾಲದ ಉಡುಗೆ-ತೊಡುಗೆಗಳು ಇಂದಿಗೂ ಆಕರ್ಷಣೀಯವಾಗಿವೆ.

# ವೇಷ-ಭೂಷಣ-೨

ಭಾರತ







ರಷ್ಯಾ

ಹಂಗೇರಿ







ರೊಮಾನ




ಟ್ಯಾಂಜಾನಿಯ




ರೊಮಾನ

ಹಂಗೇರಿ




ಸಾಂಸ್ಕೃತಿಕ ಸಂದರ್ಭವಿರಲಿ, ಸಾಮಾಜಿಕ ಪದ್ಧತಿಯಿರಲಿ ಪ್ರತಿಯೊಂದು ದೇಶದಲ್ಲೂ ಜನರು ತಮ್ಮದೇ ಆದ ವೇಷ-ಭೂಷಣಗಳನ್ನು - ಧರಿಸುತ್ತಾರೆ. ಕಾಲಮಾನದ ಪ್ರಭಾವದಿಂದ ಈ ಉಡುಗೆ ತೊಡಿಗೆ-ಗಳಲ್ಲೂ ಬದಲಾವಣೆ ಕಾಣುವುದು ಸಹಜ, ವಯಸ್ಕರಿಗಿಂತ ಮಕ್ಕಳು ಮತ್ತು ಯುವಜನರಲ್ಲಿ ಬದಲಾವಣೆ ಹೆಚ್ಚಾಗಿ ಕಂಡುಬರುತ್ತದೆ

# ಸ್ತ್ರೀ ವೇಷ ಭೂಷಣ




ಸಿಂಗಪೂರ್

ಗ್ರೀಸ್







ಓಮನ್



















ಬರ್ಮಾ          ಲಾವೋಸ್          ರಷ್ಯಾ

ಪುರುಷರಿಗಿಂತ ಮಹಿಳೆಯರ ವೇಷ-ಭೂಷಣಗಳಲ್ಲಿ ವೈವಿಧ್ಯತೆ ಮತ್ತು ಆಕರ್ಷಣೆ ಹೆಚ್ಚು. ಒಂದೊಂದು ದೇಶದ ಮಹಿಳೆಯರು ಒಂದೊಂದು ಬಗೆಯ ಉಡುಪು ಧರಿಸುತ್ತಾರೆ. ಒಡವೆ ತೊಡುತ್ತಾರೆ. ಅನೇಕ ವೇಳೆ ಸ್ತ್ರೀಯರ ವೇಷಗಳಿಂದಲೇ ಆಯಾ ದೇಶದ ಸಂಸ್ಕೃತಿಯನ್ನು ಗುರುತಿಸಲು ಸಾಧ್ಯವಾಗಬಹುದು.

# ವಸ್ತ್ರ ಕಲೆ.

ಭಾರತ




ತೊಡುವ ಬಟ್ಟೆ, ಹೊದೆಯುವ ಹೊದಿಕೆ, ಹಾಸುವ ಬಟ್ಟೆಗಳ ಮೇಲೂ ಕಲಾತ್ಮಕ ನೇಯ್ಗೆ ಮಾಡುತ್ತಾರೆ. ಹತ್ತಿ, ರೇಷ್ಮೆ ಬಟ್ಟೆಗಳನ್ನು ನೇಯುವ ಮುನ್ನ ದಾರಕ್ಕೆ ಬೇರೆ ಬೇರೆ ಬಣ್ಣಗಳನ್ನು ಹಾಕುವುದುಂಟು. ನೇಯ್ದ ಮೇಲೂ ಕಲಾತ್ಮಕವಾಗಿ ಬಣ್ಣ ಹಾಕುವುದುಂಟು. ಈ ವಸ್ತ್ರದ ಕಲೆಯಲ್ಲಿ ಸಾಮಾನ್ಯವಾಗಿ ರಂಗೋಲಿಯ ವಿನ್ಯಾಸಗಳೇ ಇರುತ್ತವೆ, ಪಕ್ಷಿ ಪ್ರಾಣಿಗಳ ಚಿತ್ರಗಳೂ ಇರುತ್ತವೆ.

# ಮುಖವಾಡಗಳು-೧

ಇಂಗ್ಲೆಂಡ್










ಬಲ್ಗೇರಿಯ




ಆಸ್ಟ್ರಿಯ




ಬಲ್ಗೇರಿಯ




ಹಂಗೇರಿ

ಮುಖವಾಡಗಳಿಗೆ ಮಾನವನ ಬದುಕಿನಷ್ಟೇ ದೀರ್ಘವಾದ ಇತಿಹಾಸವಿದೆ. ಮನರಂಜನೆ, ದೈವೀ ಆರಾಧನೆ ಇತ್ಯಾದಿಗಳಿಗಾಗಿ ಮುಖವಾಡಗಳನ್ನು ಬಳಸಲಾಗುತ್ತದೆ. ಈ ಮುಖವಾಡಗಳು ಆಯಾ ದೇಶದ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತವೆ.

# ಮುಖವಾಡಗಳು-೨




ಮಂಗೋಲಿಯ
















ಮಂಗೋಲಿಯಾ ದೇಶ ತನ್ನ ಪ್ರಾಚೀನ ಕಲೆ, ಸಂಸ್ಕೃತಿಗಳನ್ನು ರಕ್ಷಿಸಿಕೊಂಡು ಬರುತ್ತಿರುವ ದೇಶಗಳಲ್ಲಿ ಒಂದು. ರಂಗಭೂಮಿ ಮತ್ತಿತರ ಪ್ರದರ್ಶನ ಕಲೆಗಳಲ್ಲಿ ಬಳಸುವ ಮುಖವಾಡಗಳ ವೈವಿಧ್ಯತೆ ಕಾಣಬಹುದು.

# ಮುಖವಾಡಗಳು - ೨

ಭಾರತ














ಇವು ಭಾರತದಲ್ಲಿ ಬಳಕೆಯಲ್ಲಿರುವ ಮುಖವಾಡಗಳು. ಯಕ್ಷಗಾನ, ಬಯಲಾಟ ಮತ್ತು ಉತ್ಸವಗಳಲ್ಲಿ ಇವುಗಳನ್ನು ಧರಿಸಲಾಗುವುದು.


# ಮುಖವಾಡಗಳು-೪ ಈಕ್ವಟೋರಿಯಲ್




ಈಕ್ವಟೋರಿಯಲ್‌ನ ಈ ಮುಖವಾಡಗಳಲ್ಲಿ ಮನುಷ್ಯನ ಮಾನಸಿಕ ಸ್ವಭಾವಗಳನ್ನು ಗುರುತಿಸಬಹುದು. ಸೌಮ್ಯತೆ, ಉಗ್ರತೆ, ವ್ಯಾಘ್ರತೆ, ಮಗ್ನತೆ ಮೊದಲಾದ ಲಕ್ಷಣಗಳನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ.

# ಮುಖವಾಡಗಳು - ೫ ಭೂತಾನ್




ಇವು ಭೂತಾನ್‌ನಲ್ಲಿ ವಿಮಾನದ ಮೂಲಕ ರವಾನೆಯಾಗುವ ಅಂಚೆಗೆ ಬಳಸುವ ಮುಖವಾಡ ಚಿತ್ರದ ಚೀಟಿಗಳು. ವಿಚಿತ್ರ ಪ್ರಾಣಿ ಮುಖಗಳ ಚಿತ್ರವಿದ್ದರೂ ಇವು ಮುಖಕ್ಕೆ ಧರಿಸುವ ಮುಖವಾಡಗಳು.

# ಸಂಗ್ರಹಾಲಯ ವಸ್ತುಗಳು

ಭಾರತ
















ಚೆನ್ನೈನಲ್ಲಿರುವ ವಸ್ತುಸಂಗ್ರಹಾಲಯ

ವಸ್ತು ಸಂಗ್ರಹಾಲಯಗಳು ಎಲ್ಲ ದೇಶಗಳಲ್ಲೂ ಇವೆ ಈ ಸಂಗ್ರಹಾಲಯಗಳಲ್ಲಿ ಹಳೆಯ ಕಾಲದ ವಸ್ತುಗಳು, ಚಿತ್ರಗಳು ನಾಣ್ಯಗಳು, ಮತ್ತಿತರ ಅಪರೂಪದ ಸಾಮಗ್ರಿಗಳನ್ನು ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಸಂಗ್ರಹಾಲಯವೆಂದರೆ ಮಾನವನ ಬದುಕಿನ ವಿಶ್ವರೂಪ ದರ್ಶನದಂತೆ. ಕಾಲ ಕಳೆದಂತೆ ಕಣ್ಮರೆಯಾಗಿ ಹೋಗಬಹುದಾಗಿದ್ದಂತಹ ವಸ್ತುಗಳನ್ನು ವಸ್ತುಸಂಗ್ರಹಾಲಯದಲ್ಲಿ ನೋಡಬಹುದು.

# ಪ್ರಾಚ್ಯ ವಸ್ತುಗಳು

ಭಾರತ



















ಯಾವುದೇ ದೇಶದಲ್ಲಿ ಇತಿಹಾಸವನ್ನು ತಿಳಿದುಕೊಳ್ಳಲು
ಪ್ರಾಚ್ಯ ವಸ್ತುಗಳು ಮಹತ್ವದ ಸಾಕ್ಷಿಯಾಗುತ್ತವೆ. ಉತ್ಖನನ-
ದಿಂದ ದೊರೆಯುವ ಎಷ್ಟೋ ಹಳೆಯುಳಿಕೆಗಳು ಅವುಗಳ
ಕಾಲಮಾನದ ಸ್ಥಿತಿ-ಗತಿಗಳನ್ನು ಅರಿಯಲು ಸಹಕಾರಿಯಾಗುತ್ತವೆ.
ಜಗತ್ತಿನ ಎಲ್ಲ ಕಡೆಯೂ ಪ್ರಾಚ್ಯವಸ್ತು ಸಂಗ್ರಹಾಲಯಗಳಿವೆ.

# ಪಂಚತಂತ್ರ ಕಥೆಗಳು

ಭಾರತ













ದುರ್ಗಸಿಂಹ ಎಂಬುವವನು ರಚಿಸಿದ - 'ಪಂಚತಂತ್ರ' ಕಥೆ ಜಗತ್ಪ್ರಸಿದ್ಧ. ಇದರಲ್ಲಿ ರಾಜನೀತಿಯ ಐದು ಉಪಾಯಗಳಿಗೆ ಸಂಬಂಧಿಸಿದ ಪ್ರಾಣಿ-ಕಥೆಗಳಿವೆ. ಕಷ್ಟಸಂದರ್ಭ ಒದಗಿದಾಗ ತಾಳಬೇಕಾದ ಧೈರ್ಯ, ಮಾಡಬೇಕಾದ ಉಪಾಯಗಳನ್ನು ಕಥಾರೂಪದಲ್ಲಿ ಹೇಳಲಾಗಿದೆ. ಪಂಚತಂತ್ರ ಕಥೆಗಳು ಮಕ್ಕಳಿಗೆ ತುಂಬಾ ಪ್ರಿಯವಾಗುತ್ತವೆ. ಇಲ್ಲಿನ ಚೀಟಿಗಳಲ್ಲಿ ಸಿಂಹ ಮತ್ತು ಮೊಲ, ಆಮೆ ಮತ್ತು ಬಾತು. ಕಾಗೆ ಮತ್ತು ಹಾವು, ಕೋತಿ ಮತ್ತು ಮೊಸಳೆ ಕಥೆಗಳಿಗೆ ಸಂಬಂಧಿಸಿದ ಚಿತ್ರಗಳಿವೆ.

# ಜನ್ಮ ರಾಶಿಗಳು

ಭಾರತ




ಜ್ಯೋತಿಷ್ಯ ಒಂದು ಪ್ರಾಚೀನ ಶಾಸ್ತ್ರ. ಜನರಿಗೆ ಸಾಮಾನ್ಯವಾಗಿ ಈ ಶಾಸ್ತ್ರದಲ್ಲಿ ನಂಬಿಕೆ. ಜ್ಯೋತಿಷ್ಯ ಹೇಳಲು ರಾಶಿಗಳನ್ನು ಪರಿಗಣಿಸಲಾಗುತ್ತದೆ. ಜ್ಯೋತಿಷ್ಯದಲ್ಲಿ ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ ಮತ್ತು ಮೀನ ಎಂಬ ಹನ್ನೆರಡು ರಾಶಿಗಳಿವೆ. ವ್ಯಕ್ತಿಯ ಜನ್ಮರಾಶಿಯನ್ನು ನೋಡಿ ಭವಿಷ್ಯ ಹೇಳುತ್ತಾರೆ. ಮಕ್ಕಳು ಹುಟ್ಟಿದ ರಾಶಿ. ಕುಂಡಲಿ ಬರೆಸುವ ರೂಢಿ ಕೆಲವರಲ್ಲಿದೆ.

# ದಶಾವತಾರಗಳು

ಭಾರತ




ಭಾರತದ ಪುರಾಣಗಳಲ್ಲಿ ದಶಾವತಾರದ ಕಥೆ ಬರುತ್ತದೆ. ವಿಷ್ಣುವು ಲೋಕೋದ್ಧಾರಕ್ಕಾಗಿ ಹತ್ತು ಅವತಾರಗಳನ್ನು ಎತ್ತಿದನೆಂದು ಆ ಕಥೆ ಹೇಳುತ್ತದೆ. ದಶಾವತಾರಗಳೆಂದರೆ ಮತ್ಸ್ಯ, ಕೂರ್ಮ, ವರಾಹ ನರಸಿಂಹ, ವಾಮನ, ಪರುಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ದಶಾವತಾರದ ಕಥೆಗಳುಳ್ಳ ಜನಪದ ಬಯಲಾಟಗಳೂ ಉಂಟು. ವಿಷ್ಣು ದುಷ್ಟ ಶಿಕ್ಷೆ ಮತ್ತು ಶಿಷ್ಟ ರಕ್ಷಣೆಗಾಗಿ ಒಂದೊಂದು ಯುಗದಲ್ಲಿ ಒಂದೊಂದು ಅವತಾರ ಎತ್ತಿದನೆಂದು ಹೇಳಲಾಗುತ್ತದೆ.

# ದೈವಾರಾಧನೆ

ಭಾರತ










ಶ್ರೀಲಂಕಾ







ಹಂಗೇರಿ




ಸಿಂಗಪೂರ್




ಈಕ್ವೆಡಾರ್

ಈ ಜಗತ್ತಿನ ಸೃಷ್ಟಿಗೆ ಕಾರಣವಾದ ಯಾವುದೋ ಒಂದು ಶಕ್ತಿ ಇರಬೇಕು ಎಂಬ ನಂಬಿಕೆ ಸಾಮಾನ್ಯವಾಗಿ ಎಲ್ಲ ಕಡೆ ಇದೆ. ಈ ಶಕ್ತಿಯನ್ನೇ ದೇವರೆಂದು ಕರೆಯಲಾಗಿದೆ. ಈ ಪ್ರಪಂಚದ ಒಂದೊಂದು ಕಡೆ ದೇವರಿಗೆ ಒಂದೊಂದು ಹೆಸರಿದೆ. ತಮ್ಮ ಎಲ್ಲ ಆಗು-ಹೋಗುಗಳಿಗೂ ದೇವರೇ ಕಾರಣವೆಂದು ತಿಳಿದು ಪೂಜಿಸುತ್ತಾರೆ. ದೇವರ ಆರಾಧನೆಗೆ ನಾನಾ ಕಡೆ, ನಾನಾ ರೀತಿಯ ಆಚರಣೆಗಳೂ ಇವೆ.

# ಹಬ್ಬಗಳು

ಪೊಂಗಲ್










ದಸರಾ - ಕಲ್ಕತ್ತಾ

ಮೈಸೂರು ದಸರಾ




ದೀಪಾವಳಿ

ಹಬ್ಬಗಳ ಆಚರಣೆಯಲ್ಲಿ ಭಾರತ ದೇಶಕ್ಕೆ ವಿಶಿಷ್ಟ ಸ್ಥಾನವಿದೆ ಎಂದು ಹೇಳಬಹುದು. ಇಲ್ಲಿ ತಿಂಗಳಿಗೆ ಒಂದಾದರೂ ಹಬ್ಬ-ವಿರುತ್ತದೆ. ಆಚರಣೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿರುತ್ತವೆ. ಹಬ್ಬವೆಂದರೆ ಬಂಧು ಬಳಗವೆಲ್ಲ ಒಂದು ಕಡೆ ಕೂಡಿ ನಲಿ-ಯುವ ಸಂದರ್ಭ.

# ಉತ್ಸವಗಳು

ಸೋನೆಪುರ ಮೇಳ




ಬಾವುಲ್ ಮೇಳ




ಗೋವ ಉತ್ಸವ




ಪುಷ್ಕರ ಮೇಳ




ವರ್ಷವೆಲ್ಲ ದುಡಿಮೆಯಲ್ಲಿ ತೊಡಗುವ ಜನ ತಮ್ಮ ಬೇಸರ ಪರಿಹಾರಕ್ಕಾಗಿ ವರ್ಷಕ್ಕೊಮ್ಮೆ ತೇರು ಜಾತ್ರೆಗಳನ್ನು ನಡೆಸಿ, ಬೇರೆ ಬೇರೆ ಕಡೆಗಳಿಂದ ಬಂದವರೆಲ್ಲ ಒಂದು ಕಡೆ ಸೇರಿ ತಮ್ಮ ತಮ್ಮ ಹಾಡು, ಕುಣಿತ ಮತ್ತಿತರ ಕಲೆಗಳನ್ನು ಪ್ರದರ್ಶಿಸಿ ಸಂಭ್ರಮ ಪಡುವುದು ಒಂದು ರೂಢಿ. ಇವಕ್ಕೆ ಮೇಳಗಳು ಎಂದು ಕರೆಯುತ್ತಾರೆ. ಈ ಮೇಳಗಳು ಜನರ ಸಾಂಸ್ಕೃತಿಕ ಸಮಾವೇಶಗಳು, ಭಾರತದ ಕೆಲವು ಕಡೆ ನಡೆಯುವ ಇಂಥ ಮೇಳಗಳು ವಿಶ್ವ ಪ್ರಸಿದ್ಧವಾಗಿವೆ. ಮೇಳಗಳಲ್ಲಿ ಭಿನ್ನ ಭಿನ್ನ ಪ್ರದೇಶ, ಭಿನ್ನ ಭಿನ್ನ ಭಾಷೆಯ, ಭಿನ್ನ ಭಿನ್ನ ಜನ ಸೇರುತ್ತಾರೆ. ಈ ಮೇಳಗಳ ಆಶಯ ಮುಖ್ಯವಾಗಿ ಮನರಂಜನೆ. ಜನಪದ ಕಲಾ ಪ್ರದರ್ಶನಕ್ಕೆ ಈ ಮೇಳಗಳು ಒಳ್ಳೆಯ ಅವಕಾಶ ದೊರಕಿಸುತ್ತವೆ.

# ಶಿರಶೃಂಗಾರ




ತಲೆಗೆ ಕೂದಲೇ ಶೃಂಗಾರ. ಆದರೂ, ಕೆಲವು ದೇಶಗಳಲ್ಲಿ ಜನರು ತಲೆಯ ಕೂದಲ ಮೇಲೂ ಟೊಪ್ಪಿಗೆ ರೀತಿಯಲ್ಲಿ ಬೇರೆ ಅಲಂಕಾರ ಮಾಡಿಕೊಳ್ಳುವ ರೂಢಿಯಿದೆ. ಕೆಲವು ಸಂದರ್ಭಗಳಲ್ಲಿ ಈ ಭೂಷಣಗಳು ತಲೆಗೆ ರಕ್ಷಣೆಯಾಗಿಯೂ ಇರಬಹುದು. ಕೇಶ ಶೃಂಗಾರಕ್ಕೆ ಹೂವು, ಬಟ್ಟೆ, ಕೆಲವು ಕಡೆ ಲೋಹಗಳನ್ನು ಬಳಸುವುದುಂಟು.

## ಅನುಬಂಧ

# ವಿಶ್ವದಾದ್ಯಂತ ವಿವಿಧ ರಾಷ್ಟ್ರಗಳು ತಮ್ಮ ಮೊದಲ ಅಂಚೆಚೀಟಿ ಹೊರತಂದ ವರ್ಷ

೧೮೪೦ – ಗ್ರೇಟ್ ಬ್ರಿಟನ್

೧೮೪೩ – ಬ್ರೆಜಿಲ್, ಜಿನೇವಾ, ಝ್ಯೂರಿಚ್

೧೮೪೫ – ಅಮೇರಿಕಾ ಸಂಯುಕ್ತ ಸಂಸ್ಥಾನ, ಬಾಸೆಲ್.

೧೮೪೭ – ಮಾರಿಷಸ್, ಟ್ರಿನಿಡಾಡ್

೧೮೪೮ – ಬರ್ಮೂಡ

೧೮೪೯ – ಬೆಲ್ಜಿಯಂ, ಫ್ರಾನ್ಸ್, ಬವೇರಿಯಾ

೧೮೫೦ – ಆಸ್ಟ್ರಿಯ, ಬ್ರಿಟಿಷ್ ಗಯಾನ, ಸ್ಪೇನ್, ಸ್ವಿಟ್ಜರ್‌ಲ್ಯಾಂಡ್.

೧೮೫೧ – ಕೆನಡ, ಡೆನ್‌ಮಾರ್ಕ್, ಹವಾಯ್ ದ್ವೀಪಗಳು.

೧೮೫೨ – ಭಾರತ, ನೇದರ್‌ಲ್ಯಾಂಡ್, ಲಕ್ಸೆಂಬರ್ಗ್, ರೋಮನ್ ಸ್ಟೇಟ್ಸ್

೧೮೫೩ – ಪೋರ್ಚುಗಲ್, ಚಿಲಿ, ಕೇಪ್ ಆಫ್ ಗುಡ್ ಹೋಪ್.

೧೮೫೪ – ಆಸ್ಟ್ರೇಲಿಯ, ಫಿಲಿಫೀನ್ಸ್.

೧೮೫೫ – ಕ್ಯೂಬಾ, ನ್ಯೂಜಿಲ್ಯಾಂಡ್, ನಾರ್ವೆ, ಸ್ವೀಡನ್.

೧೮೫೬ – ಫಿನ್‌ಲ್ಯಾಂಡ್, ಉರುಗ್ವೆ, ಮೆಕ್ಸಿಕೊ.

೧೮೫೭ – ಶ್ರೀಲಂಕಾ, ಪೆರು, ನ್ಯೂ ಫೌಂಡ್ ಲ್ಯಾಂಡ್.

೧೮೫೮ – ರಷ್ಯಾ, ಅರ್ಜೆಂಟೈನಾ,

೧೮೫೯ – ವೆನಿಜೂಲ, ಫ್ರೆಂಚ್ ಕಾಲೋನಿಗಳು

೧೮೬೦ – ಜಮೈಕಾ, ಲೈಬೀರಿಯಾ ಪೋಲ್ಯಾಂಡ್, ಸೆಂಟ್ ಲೂಸಿಯಾ.

೧೮೬೧ – ಗ್ರೀಸ್, ಗ್ರೆನೆಡ, ಸೆಂಟ್ ವಿನ್‌ಸೆಂಟ್.

೧೮೬೨ – ಇಟಲಿ, ಹಾಂಗ್‌ಕಾಂಗ್, ನಿಕಾರಗುವ, ಆಂಟಿಗುವ.

೧೮೬೩ – ಟರ್ಕಿ, ಬೊಲಿವ, ಕೋಸ್ಟಾರಿಕಾ,

೧೮೬೪ – ಡಚ್ ಇಂಡೀಸ್, ಮೆಕ್ಲೆನ್.

೧೮೬೫ – ರುಮೇನಿಯಾ, ಈಕ್ವೆಡಾರ್, ಡೊಮೆನಿಕಾ.

೧೮೬೬ – ಈಜಿಪ್ಟ್, ಬೊಲಿವಿಯ, ಹೊಂಡುರಾಸ್.

೧೮೬೭ – ಸಲ್ವಡಾರ್, ಹೆಲಿಗೊಲ್ಯಾಂಡ್

೧೮೬೮ – ಜರ್ಮನಿ, ಹಂಗೇರಿಯ, ಆಂಟಿಕ್ವಿಯ.

೧೮೬೯ – ಗಾಂಬಿಯಾ, ಸರವಾಕ್, ಟ್ರಾನ್ಸ್‌ವಾಲ್

೧೮೭೦ – ಅಫ್ಘಾನಿಸ್ಥಾನ, ಪೆರುಗ್ವೆ, ಅಂಗೋಲಾ, ಫಿಜಿ, ಸೆಂಟ್ ಥಾಮಸ್.

೧೮೭೧ – ಜಪಾನ್, ಹಂಗೇರಿ, ಗ್ವಾಟೆಮಾಲ

೧೮೭೩ – ಕ್ಯೂಬ, ಸುರಿನಾಮ್.

೧೮೭೪ – ಟಾಪ್ರೋಸ್, ಡೊಮಿನಿಕಾ

೧೮೭೫ – ಗೋಲ್ಡ್ ಕೋಸ್ಟ್.

೧೮೭೬ – ಮೊಜಾಂಬಿಕ್, ಜೋಹಾರ್

೧೮೭೭ – ಸಾನ್ ಮೆರಿನೊ, ಕೇಪ್ ವರ್ಡೇ.

೧೮೭೮ – ಹೊಂಡುರಾಸ್, ಚೀನ, ಪನಾಮ.

೧೮೭೯ – ಬಲ್ಗೇರಿಯಾ, ಬಾಸ್ನಿಯಾ, ಟ್ರೊಬ್ಯಾಗೋ

೧೮೮೦ – ಸೈಪ್ರೆಸ್, ಕಾಮೇಲಿಯಾ.

೧೮೮೧ – ನೇಪಾಳ, ಪೋರ್ಚುಗೀಸ್, ಗಿನಿ,

೧೮೮೨ – ಬ್ಯಾಂಕಾಕ್, ತಹಿತಿ.

೧೮೮೩ – ಉತ್ತರ ಬೊರ್ನಿಯಾ, ಸಯಾಮ್.

೧೮೮೪ – ಕೊರಿಯಾ, ಮಡಗಾಸ್ಕರ್, ಮಕಾವ್.

೧೮೮೫ – ಮೊನೆಕೊ, ಬಲ್ಗೇರಿಯಾ.

೧೮೮೬ – ಬೆಲ್ಜಿಯಂ, ಕಾಂಗೊ, ಜಿಬ್ರಾಲ್ಟರ್, ಫ್ರೆಂಚ್ ಗಯನಾ.

೧೮೮೭ – ಸೆನೆಗಲ್.

೧೮೮೮ – ಜೂಲೂಲ್ಯಾಂಡ್, ಅನಾಂಟಾಂಕ್ವಿನ್

೧೮೮೯ – ಇಂಡೋ ಚೀನ, ಫ್ರೆಂಚ್ ಮಡಗಾಸ್ಕರ್.

೧೮೯೦ – ಈಸ್ಟ್ ಆಫ್ರಿಕ ಡಯಾಗೊ.

೧೮೯೧ – ಫ್ರೆಂಚ್ ಕಾಂಗೋ, ಮೊರಾಕೊ, ಸೆಂಗಿಲಾನ್,

೧೮೯೨ – ಫ್ರೆಂಚ್ ಗಿನಿಯ, ಐವರಿ ಕೋಸ್ಟ್

೧೮೯೩ – ಟ್ಯಾಂಗಾನೀಕ.

೧೮೯೪ – ಅಬಿಸೀನಿಯಾ, ಸೂಡಾನ್, ಜಾಂಜಿಬಾರ್.

೧೮೯೫ – ಉಗಾಂಡ.

೧೮೯೬ – ರುಮೇನಿಯಾ, ಮಡಗಾಸ್ಕರ್.

೧೮೯೭ – ಕ್ಯಾಮರೂನ್, ಗ್ರಾಂಡ್ ಕೊಮೆರೊ

೧೮೯೮ – ಪೋರ್ಚುಗೀಸ್, ನ್ಯೂಗಿನಿ.

೧೮೯೯ – ಬೊಯೋಕಾ, ಕ್ಯಾರೋಲಿನ್ ದ್ವೀಪಗಳು.

೧೯೦೦ – ಮಲಯ ರಾಜ್ಯಗಳು, ನೈಜೀರಿಯಾ.

೧೯೦೧ – ಕೆಮನ್ ದ್ವೀಪಗಳು.

೧೯೦೨ – ಸೋಮಾಲಿ ಲ್ಯಾಂಡ್.

೧೯೦೩ – ನೈಗರ್.

೧೯೦೪ – ಪನಾಮ ಕೆನಾಲ್ ಜೋನ್.

೧೯೦೫ – ರಯೋಡಿ ಜನೈರೊ

೧೯೦೬ – ಬ್ರೂನಿ, ಮೊಂಟಿನಿಯಾ

೧೯೦೭ – ಸಾಲೊಮನ್ ದ್ವೀಪಗಳು , ಮಿಡಲ್ ಕಾಂಗೊ.

೧೯೦೮ – ನ್ಯೂ ಹೈಬ್ರಿಡ್ಸ್.

೧೯೧೦ – ಯೂನಿಯನ್ ಆಫ್ ಸೌತ್ ಆಫ್ರಿಕ.

೧೯೧೧ – ಟಿಬೆಟ್, ಗಿಲ್ಬರ್ಟ್, ಎಲ್ಲೀಸ್ ದ್ವೀಪಗಳು.

೧೯೧೨ – ಏಜಿಯನ್ ದ್ವೀಪಗಳು.

೧೯೧೩ – ಆಲ್ಬೇನಿಯಾ, ಟ್ರಿನಿಡಾಡ್, ಟೊಬ್ಯಾಗೊ.

೧೯೧೪ – ನೈಜೀರಿಯಾ.

೧೯೧೫ – ಸೌದಿ ಅರೇಬಿಯಾ.

೧೯೧೮ – ಇರಾಕ್, ಉಕ್ರೇನ್, ಚಕೋಸ್ಲೋವಿಯಾ.

೧೯೧೯ – ಸಿರಿಯಾ, ಜಾರ್ಜಿಯ.

೧೯೨೦ – ಅಥುಯೇನಿಯ, ಆರ್ಮೇನಿಯ, ಜೋರ್ಡಾನ್

೧೯೨೧ – ನೈಗರ್ ಟೋಗೋ.

೧೯೨೨ – ಬಾರ್ಬುಡ, ಐರ್ಲೆಂಡ್.

೧೯೨೩ – ಕೈವಟ್, ಲೀಗ್ ಆಫ್ ನೇಷನ್ಸ್.

೧೯೨೪ – ಲೆಬನಾನ್, ಮಂಗೋಲಿಯ.

೧೯೨೫ – ಅಲೂವಿಟನ್.

೧೯೨೬ – ಯಮೆನ್, ಉತ್ತರ ಮಂಗೋಲಿಯ.

೧೯೨೮ – ಆಂಡ್ರೋರ್ರಾ.

೧೯೨೯ – ವ್ಯಾಟಿಕಾನ್ ಸಿಟಿ.

೧೯೩೧ – ಮೋರ್ವಿ.

೧೯೩೨ – ಇನಿನಿ ಮಂಚೂರಿಯಾ.

೧೯೩೩ – ಬೆಹರಿನ್, ಬುಸುಟುಲ್ಯಾಂಡ್.

೧೯೩೭ – ಬರ್ಮಾ, ಏಡೆನ್.

೧೯೩೮ – ಗ್ರೀನ್ ಲ್ಯಾಂಡ್.

೧೯೩೯ – ಇಡರ್, ಸ್ಲೋವಾಕಿಯ.

೧೯೪೦ – ಫೆರೋ ದ್ವೀಪಗಳು, ಕ್ರೋಟಿಯ ಇಪ್ಪಿ.

೧೯೪೧ – ವಾನಲ್ ದ್ವೀಪಗಳು, ಕ್ರೋಟಿಯ ಇಪ್ಪಿ.

೧೯೪೪ – ಫಾಕ್‌ಲ್ಯಾಂಡ್ ಐಲ್ಯಾಂಡ್.

೧೯೪೫ – ಇಂಡೋನೇಷ್ಯಿಯ, ವಿಯೆಟ್ನಾಂ.

ಇಲ್ಲಿರುವ ಅಂಚೆಚೀಟಿಗಳು ಈ ದೇಶಗಳವು:

| | | |
|---|---|---|
| ಅಂಗೋಲ | ಗಿನಿಯ | ಭಾರತ |
| ಅಮೆರಿಕ | ಗ್ರೀಸ್ | ಭೂತಾನ್ |
| ಆಸ್ಟ್ರಿಯ | ಗ್ರೆನೆಡ | ಬೆಲುರಾಸ್ |
| ಆಸ್ಟ್ರೇಲಿಯ | ಚೀನಾ | ಮಂಗೋಲಿಯ |
| ಇಂಗ್ಲೆಂಡ್ | ಜಪಾನ್ | ಮಾಲ್ಡೀವ್ಸ್ |
| ಇರಾನ್ | ಜರ್ಮನಿ | ಮಾಲಿ |
| ಇಸ್ರೇಲ್ | ಜಾಂಬಿಯ | ಮೆಕ್ಸಿಕೊ |
| ಈಕ್ವೆಡಾರ್ | ಟಿವಾಚ್ | ಮೊಜಾಂಬಿಕ್ |
| ಈಜಿಪ್ಟ್ | ಟ್ಯಾಂಜಾನಿಯ | ವೋಲ್ಟ |
| ಉಗಾಂಡ | ಥಾಯ್‌ಲ್ಯಾಂಡ್ | ರವಾಂಡ್ವೈಸ್ |
| ಐರ್‌ಲ್ಯಾಂಡ್ | ದಕ್ಷಿಣ ಆಫ್ರಿಕ | ರಷ್ಯಾ |
| ಒಮಾನ್ | ದಹೋಮಿ | ರೊಮೇನಿಯ |
| ಕಾಂಗೋ | ನಿಕಾರಗುವ | ಲಾವೋಸ್ |
| ಕಾಂಪೂಚಿಯ | ನ್ಯೂಜಿಲ್ಯಾಂಡ್ | ಲೆಬನಾನ್ |
| ಕ್ಯಾಮರೂನ್ | ನೇಪಾಳ | ಲೆಸೊತೊ |
| ಕುವೈತ್ | ಪಾಕೀಸ್ಥಾನ | ಲೈಬೀರಿಯ |
| ಕ್ಯೂಬ | ಫಿಲಿಪೈನ್ಸ್ | ವಿಯೆಟ್ನಾಂ |
| ಕಿನ್ಯಾ | ಪೋಲ್ಯಾಂಡ್ | ಶ್ರೀಲಂಕಾ |
| ಕೆನಡ | ಬರ್ಮಾ | ಸ್ವಿಡ್ಜರ್ ಲ್ಯಾಂಡ್ |
| ಕೊರಿಯ | ಬಲ್ಗೇರಿಯ | ಸೆನೆಗಾಲ್ |
| ಖರಗೀಸ್ಥಾನ್ | ಬಾಂಗ್ಲದೇಶ | ಹಂಗೇರಿ. |

ಇಲ್ಲಿರುವ ಅಂಚೆಚೀಟಿಗಳಲ್ಲಿ ಆದಿ ಮಾನವನ
ಬದುಕಿನಿಂದ ಹಿಡಿದು ಆಧುನಿಕ ನಾಗರಿಕತೆಯ ವರೆಗಿನ
ಜಾನಪದಕ್ಕೆ ಸಂಬಂಧಿಸಿದ ಕಸುಬು-ಕಲೆಗಳು
ಹವ್ಯಾಸಗಳು, ಕ್ರೀಡೆಗಳು, ಮನರಂಜನಾ ಮಾಧ್ಯಮಗಳು,
ಕರಕುಶಲ ಕಲೆಗಳು, ಮಕ್ಕಳ ಚಿತ್ರಗಳು, ಆಟಿಕೆಗಳು,
ಧರಿಸುವ ವೇಷ-ಭೂಷಣಗಳು, ಆಚರಿಸುವ
ಹಬ್ಬ-ಉತ್ಸವಗಳು, ಬಳಸುವ ಸಾಧನ ಸಲಕರಣೆಗಳು
ವಾದ್ಯಗಳು. ಹೀಗೆ ನಾನಾ ರೂಪದ ಚಿತ್ರಗಳಿವೆ.
ಪ್ರತಿಯೊಂದು ಗುಂಪಿನ ಅಂಚೆ ಚೀಟಿಗಳಿಗೆ
ಸಂಬಂಧಿಸಿದ ಸ್ಥೂಲ ಪರಿಚಯವಿದೆ.
ಈ ಜಾನಪದ ಅಂಚೆಚೀಟಿಗಳು
ಜಗತ್ತಿನ ಬೇರೆ ಬೇರೆ ದೇಶಗಳ ಅಂಚೆ ಇಲಾಖೆಗಳು
ಪ್ರಕಟಿಸಿದವು. ಈ ಚೀಟಿಗಳನ್ನು ಗಮನಿಸಿದರೆ
ಆಯಾ ದೇಶದ ಜನ ಸಂಸ್ಕೃತಿಯನ್ನು
ಗುರುತಿಸಬಹುದು. ಆಸಕ್ತರು, ಅದರಲ್ಲೂ ವಿದ್ಯಾರ್ಥಿಗಳಿಗೆ
ಈ "ಅಂಚೆ ಜಾನಪದ" ಸಚಿತ್ರ ಕೃತಿ
ಉಪಯುಕ್ತ ಮಾಹಿತಿ ಒದಗಿಸುತ್ತದೆ.

ಗೊ.ರು.ಚ

